ಅಧ್ಯಾಯ 11

ಹದಿಹರೆಯ, ಒಂದು ಜೈವಿಕ-ಮಾನಸಿಕ-ಸಾಮಾಜಿಕ ಸ್ಥಿತ್ಯಂತರ




ಜಗತ್ತಿನ ಹಲವು ಸಮಾಜಗಳಲ್ಲಿ ಮನುಷ್ಯರು, ಲೈಂಗಿಕವಾಗಿ ಪ್ರೌಢರಾಗುವುದಕ್ಕೂ, 'ಪೂರ್ಣಪ್ರಬುದ್ಧ'ರಾಗುವುದಕ್ಕೂ ನಡುವೆ ಹಲವಾರು ವರ್ಷಗಳ ಅಂತರವಿದೆ. ಯುವಜನರು ನಿಜವಾಗಿಯೂ ಸ್ವತಂತ್ರರಾಗಲು ಬಹಳಷ್ಟು ಸಂಕೀರ್ಣ ಕೌಶಲಗಳನ್ನು ಕರಗತ ಮಾಡಿಕೊಳ್ಳಬೇಕಾದ ಆವಶ್ಯಕತೆ ಇರಬೇಕಾಗಿರುವುದೇ ಈ ಅಂತರಕ್ಕೆ ಮುಖ್ಯ ಕಾರಣವೆನಿಸುತ್ತದೆ. ಔದ್ಯೋಗೀಕರಣ ಹೊಂದಿದ ಸಮಾಜಗಳಲ್ಲಿ ಇದು ಸುಮಾರು ಹದಿನೆಂಟು ಅಥವಾ ಅದಕ್ಕಿಂತ ಹೆಚ್ಚಿನ ಹರೆಯದವರೆಗೂ ಪೂರ್ಣವಾಗಿರುವುದಿಲ್ಲ. ಈ ಅವಧಿಯನ್ನೇ ಹದಿಹರೆಯವೆಂದು ಕರೆಯಲಾಗಿದ್ದು, ಇದೊಂದು ಸಾಮಾಜಿಕ ಸೃಷ್ಟಿಯೇ ಅಥವಾ ಬೆಳವಣಿಗೆಯ ಒಂದು ಸಹಜ ಹಂತವೇ ಎಂಬ ಕುರಿತು ಮನೋವಿಜ್ಞಾನಿಗಳಲ್ಲಿಯೇ ಭಿನ್ನಾಭಿಪ್ರಾಯವಿದೆ. ಕೆಲವರು ಇದೊಂದು **ಔದ್ಯೋಗೀಕರಣಗೊಂಡ ಸಮಾಜಗಳ ಸೃಷ್ಟಿ** ಎಂದು ಭಾವಿಸಿದರೆ, ಇನ್ನು ಕೆಲವರು ಯಾವುದೇ ಸಮಾಜವಿರಲಿ, ಬಾಲ್ಯ

ಮತ್ತು ಪ್ರಬುದ್ಧತೆಯ ನಡುವೆ ಹೊಂದಾಣಿಕೆಯ ಒಂದು ಅವಧಿ ಇರಲೇಬೇಕೆಂದು ಭಾವಿಸುತ್ತಾರೆ. ಹೊಸ ಸಾಮಾಜಿಕ ಪಾತ್ರಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಜೊತೆಗೆ ದೇಹದಲ್ಲಿನ ಜೈವಿಕ ಬದಲಾವಣೆಗಳೂ ಸೇರಿರುವಾಗ, ಎಳೆಯರು ಈ ಸವಾಲುಗಳನ್ನು ಯಾವುದೇ ಒತ್ತಡವಿಲ್ಲದೇ ಆರಾಮವಾಗಿ ಎದುರಿಸುವರು ಎಂಬ ಕಲ್ಪನೆಯೇ ಬಾಲಿಶವಾಗಿದೆ. ಈ ದೃಷ್ಟಿಕೋನದಿಂದ ಹದಿಹರೆಯ ಮತ್ತು ಅದರ ಹಲವು ವಿಶಿಷ್ಟ ಲಕ್ಷಣಗಳು ಹೆಚ್ಚೂ ಕಡಿಮೆ ಒಂದು ಸಾರ್ವತ್ರಿಕ ವಿದ್ಯಮಾನವಾಗಿದೆ.

ಪಾಶ್ಚಾತ್ಯ ಮನೋವೈಜ್ಞಾನಿಕ ಪಠ್ಯಪುಸ್ತಕಗಳನ್ನು ಓದುವ ಭಾರತದಲ್ಲಿನ ವಿದ್ಯಾರ್ಥಿಗಳು, ಅವುಗಳಲ್ಲಿ ಕಂಡು ಬರುವ ಹದಿಹರೆಯದ ವರ್ಣನೆಗಳಿಗೂ ತಮಗೂ ಅತ್ಯಲ್ಪ ಸಂಬಂಧ ಅಥವಾ ಯಾವುದೇ ಸಂಬಂಧವಿದ್ದಂತೆ ಭಾಸವಾಗುವುದಿಲ್ಲವೆಂದು ಬಹಳ ಸಲ ಹೇಳುತ್ತಿರುತ್ತಾರೆ. ಬಹುಶಃ, ಅಲ್ಲಿನ ಅಧ್ಯಾಯಗಳನ್ನು ಬರೆದಿರುವ ರೀತಿಯೇ ಇದಕ್ಕೆ ಬಹುಮಟ್ಟಿನ ಕಾರಣವಿರಬೇಕು. ಅವುಗಳ ಓದುಗರು ಮೂಲತಃ ಪಾಶ್ಚಾತ್ಯರೇ ಆಗಿದ್ದು, ಭಾರತೀಯ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಬರೆದಿರುವುದಿಲ್ಲ. ಹದಿಹರೆಯದ ವಿಚಾರದಲ್ಲಿ ನಮಗೆ ಅನ್ವಯವಾಗುವ ಉತ್ತಮ ಗುಣಮಟ್ಟದ ಮನೊವೈಜ್ಞಾನಿಕ ಸಂಶೋಧನೆಗಳು ಸಾಕಷ್ಟಿವೆ. ತಾತ್ವಿಕವಾಗಿ ಗಮನಿಸಿದರೆ, ಭಾರತೀಯ ಹದಿಹರೆಯದವರನ್ನು ಕುರಿತು ನಾವು ನಮ್ಮದೇ ಆದ ಸಂಶೋಧನೆಗಳನ್ನು ಕೈಗೊಳ್ಳಬೇಕು. ಆದರೆ ಈ ವಿಷಯದ ಕುರಿತು ನಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿಕೊಳ್ಳಲು ಅಗತ್ಯವಿರುವ ಬೃಹತ್ ಸಂಶೋಧನಾ ತಳಹದಿಯನ್ನು ಹೊಂದಲು, ನಾವು ಬಹು ದೂರದ ಹಾದಿಯನ್ನು ಕ್ರಮಿಸಬೇಕಾಗಿದೆ. ಆದ್ದರಿಂದ ಈ ಅಧ್ಯಾಯದಲ್ಲಿ ಮುಖ್ಯವಾಹಿನಿ ಮನೋವಿಜ್ಞಾನ ಕಂಡುಕೊಂಡಿರುವ ಅಂಶಗಳಿಂದ ನಮಗೆ ಉಪಯುಕ್ತ ಹಾಗು ಆಸಕ್ತಿಕರವಾಗಬಲ್ಲ ಕೆಲವು ಹೊಳಹುಗಳ ಸವಿಯನ್ನು ಪರಿಚಯಿಸುತ್ತೇನೆ.

ಮನೋವೈಜ್ಞಾನಿಕ ಸಂಶೋಧನೆಗಳು, ಹದಿಹರೆಯದ ಕುರಿತ ಪಾಶ್ಚಾತ್ಯ ಪರಿಕಲ್ಪನೆಗಳ ಬಗ್ಗೆ ಪೂರ್ವಗ್ರಹದಿಂದ ಕೂಡಿರುವ ಜೊತೆಗೇ, ಈ ಬೆಳವಣಿಗೆಯ ಅವಧಿಯತ್ತ ಋಣಾತ್ಮಕ ಗ್ರಹಿಕೆಗಳನ್ನೂ ಹೊಂದಿವೆ. 1950ರ ದಶಕದಿಂದಲೂ ಮನೋವಿಜ್ಞಾನಿಗಳು ಅಧ್ಯಯನ ನಡೆಸಿ, ಹದಿಹರೆಯದವರಲ್ಲಿ ಕಂಡುಬರುವ ವಯಸ್ಕರೊಂದಿಗಿನ ಸಂಘರ್ಷಗಳು, ಅಪರಾಧೀ ಪ್ರವೃತ್ತಿಗಳು, ಅನ್ಯಮನಸ್ಕತೆ ಮತ್ತು ಅಪಾಯವನ್ನು ಆಹ್ವಾನಿಸಿಕೊಳ್ಳುವ ಗುಣಗಳತ್ತ ಗಮನ ಹರಿಸಿದ್ದಾರೆ. ಇದರಿಂದಾಗಿಯೆ ಹದಿಹರೆಯವನ್ನು 'ಸಂಕ್ಷೋಭೆ ಮತ್ತು ಒತ್ತಡ' (storm and stress) ಮಾದರಿಯೆಂದು ಕರೆಯಲಾಗುತ್ತದೆ. ಇದರಲ್ಲಿ ಹದಿಹರೆಯದ ಪ್ರಕ್ಷುಬ್ಧತೆಯನ್ನು ಕುರಿತು ಇರುವ ಬಹುಪಾಲು ವರ್ಣರಂಜಿತ ವಿವರಗಳಲ್ಲಿ ಸಿಗ್ಮಂಡ್ ಫ್ರಾಯ್ಡ್ ಅವರ ಹೆಜ್ಜೆ ಗುರುತುಗಳು ಕಾಣುತ್ತವೆ. ವಾಸ್ತವದಲ್ಲಿ,



ಅವರ ಮಗಳಾದ ಅನ್ನಾ ಫ್ರಾಯ್ಡ್ 'ಹದಿಹರೆಯದಲ್ಲಿ ಸಹಜವಾಗಿರುವುದೇ ಅಸಹಜ'! ಎಂದು ನಂಬಿದಂತೆ ಕಂಡುಬರುತ್ತದೆ. ಈ 'ರೂಢಮಾದರಿ'ಯನ್ನು ಸುಮಾರು 1990ರ ದಶಕದಿಂದೀಚೆಗೆ ಹಲವು ಮನೋವಿಜ್ಞಾನಿಗಳು ಮರುಪರೀಕ್ಷೆಗೆ ಒಳಪಡಿಸತೊಡಗಿದ್ದಾರೆ. ಹದಿಹರೆಯವನ್ನು ಕುರಿತು ತಕ್ಕಮಟ್ಟಿಗೆ ಋಣಾತ್ಮಕವೇ ಎಂಬ ದೃಷ್ಟಿಕೋನವನ್ನು ಸಾಮಾನ್ಯ ಜನರೂ ಹೊಂದಿರುವುದು ಆಸಕ್ತಿಕರ ವಿಷಯವಾಗಿದೆ. ಹೀಗಿರುವುದರಿಂದ, ಯಾರದ್ದೇ ಸಂಶೋಧನೆಯ ಫಲಿತಾಂಶಗಳನ್ನು ಸಮಂಜಸವೆಂದು ಭಾವಿಸುವುದು ಕಷ್ಟವಾಗುತ್ತದೆ. ಹದಿಹರೆಯದವರ ಸಮಸ್ಯೆಯಲ್ಲಿ ಎಷ್ಟು ಪಾಲು 'ತಮ್ಮ ಪಾತ್ರವನ್ನು ನಿಭಾಯಿಸುವುದ'ರ ಕುರಿತದ್ದು? ನಮಗೆ ಲಭ್ಯವಿರುವ ಮಾನವ ವಿಕಾಸವನ್ನು ಅಧ್ಯಯನ ಮಾಡುವ ವಿಧಾನಗಳೂ ಅಂತಹ ಸಮಸ್ಯೆಗಳಿಂದ ಮುಕ್ತವಾಗಿಲ್ಲ.

ಹದಿಹರೆಯದವರ ಮನಸ್ಸುಗಳ ಇಣುಕು ನೋಟವೊಂದನ್ನು ಪಡೆಯಲು ನಮಗಿರುವುದು ಕೆಲವೇ ಕೆಲವು ವಿಧಾನಗಳು. ಮೊದಲನೆಯದೆಂದರೆ, ನೀವು ಸುಮ್ಮನೆ ಅವರ ಜೊತೆ ಮಾತನಾಡಬಹುದು ಹಾಗು ಪ್ರಶ್ನೆಗಳನ್ನು ಕೇಳಬಹುದು, ಇದನ್ನು ಸ್ವವರದಿ ವಿಧಾನವೆನ್ನುತ್ತಾರೆ. ದುರದೃಷ್ಟವಶಾತ್, ಖಾಸಗಿತನದ ಅತಿಯಾದ ಆವಶ್ಯಕತೆಯೇ ಹದಿಹರೆಯದ ಒಂದು ಹೆಗ್ಗುರುತು. ಹಾಗಾಗಿ, ಈ ವಿಧಾನದಿಂದ ನಿಖರ ಚಿತ್ರಣ ಸಿಗದೇ ಹೋಗಬಹುದು. ಎರಡನೆಯದೆಂದರೆ, ನೀವು ಅವರ ಪೋಷಕರು, ಗೆಳೆಯರು ಮತ್ತು ಶಿಕ್ಷಕರಂತಹ ಆಪ್ತರ ಜೊತೆ ಮಾತನಾಡಬಹುದು. ಆದರೆ ಅವರೂ ಹದಿಹರೆಯದ 'ಸಂಕ್ಷೋಭೆ ಮತ್ತು ಒತ್ತಡ'ದ ರೂಢಮಾದರಿಯ ಪೂರ್ವಗ್ರಹಕ್ಕೊಳಗಾಗಿರಬಹುದು. ಆದ್ದರಿಂದ, ಈ ವಿಧಾನವೂ ನಿರ್ದಿಷ್ಟ ಫಲಿತಾಂಶಗಳನ್ನು ಕೊಡದಿರಬಹುದು. ಮೂರನೆಯದಾಗಿ, ನೀವು ಹದಿಹರೆಯದವರ ವಿವಿಧ ವರ್ತನೆಗಳ ಆವರ್ತನೆಯನ್ನು ಗಮನಿಸಿ ಅವರ ಮನಸ್ಸಿನಲ್ಲಿ ಏನು ನಡೆಯುತ್ತಿದೆಯೆಂದು ನಿರ್ಣಯಿಸಬಹುದು. ಯುವಜನರ ಬಗೆಗಿನ ಸಾಮಾನ್ಯ ಅನಿಸಿಕೆಗಳನ್ನು ಆಧರಿಸಿ, ಮನೋವಿಜ್ಞಾನಿಗಳು ಆರಾಮ ವೇದಾಂತವನ್ನು (ಯಾವುದೇ ನೇರವಾದ ಅಧ್ಯಯನ ಮಾಡದೇ ಒಂದಷ್ಟು ತತ್ತ್ವಗಳನ್ನು ಹೇಳುವುದು) ಉಸುರುವುದರ ಜೊತೆಗೆ ಮೇಲಿನ ಎಲ್ಲ ವಿಧಾನಗಳನ್ನು ಅನುಸರಿಸಿದ್ದಾರೆ. ಈ ಎಲ್ಲ ವಿಧಾನಗಳಲ್ಲೂ ಒಂದು ಸಮಸ್ಯೆಯಿದೆ. ಶೀಘ್ರವಾಗಿ ಬದಲಾಗುವ ಹಾರ್ಮೋನುಗಳ (ರಸದೂತಕಗಳ) ಕ್ರಿಯೆಯು ಮನಸ್ಸಿನಲ್ಲಿ ಪ್ರತಿ ನಿಮಿಷವೂ ನಡೆಯುವ ಭಾವನಾತ್ಮಕ ಏರುಪೇರುಗಳು ಅಥವಾ ಮನಃಸ್ಥಿತಿಯ ಬದಲಾವಣೆಗಳನ್ನು ಅಂದಾಜು ಮಾಡಬಲ್ಲದು. ಆದರೆ, ಇದನ್ನು ಮೇಲಿನ ಯಾವ ವಿಧಾನಗಳೂ ಮಾಡಲಾರವು ಎನ್ನುವುದೇ ಆ ಸಮಸ್ಯೆ. ಈ ಸಮಸ್ಯೆಯನ್ನು ಮನೋವಿಜ್ಞಾನಿಗಳಾದ, ಮಿಹಲಿ ಸಿಕ್ಸೆಂಟ್‌ಮಿಹಲ್ಯ ಹಾಗು ರೀಡ್ ಲಾರ್ಸನ್ ಅವರು ಈ ಕೆಳಗೆ ಕಾಣಿಸಿರುವ ಕಾಲ್ಪನಿಕ ರೀತಿಯಲ್ಲಿ ಪರಿಹರಿಸಿದ್ದಾರೆ. ಈ ಹದಿಹರೆಯದವರಿಗೆ ಪ್ರತಿ ಎರಡು ಗಂಟೆಗೊಮ್ಮೆ ಬೀಪ್ ಸದ್ದು ಮಾಡುವಂತಹ (beeping) ಕರೆಗಂಟೆಗಳನ್ನು ನೀಡಲಾಯಿತು. ಕರೆಗಂಟೆಯ ಸದ್ದಾದಾಗ ಯುವಕ-ಯುವತಿಯರು ತಮ್ಮ ಆಗಿನ ಚಟುವಟಿಕೆ, ಮನಃಸ್ಥಿತಿ, ಆಲೋಚನೆ ಮತ್ತು ಭಾವನೆಗಳನ್ನು, ಕೊಟ್ಟಿರುವ ಹಾಳೆಯಲ್ಲಿ ಬರೆದಿಡಬೇಕಾಗಿತ್ತು. ಈ ವಿಧಾನವು ಹದಿಹರೆಯದವರಲ್ಲಿ ನೆಲೆಸಿರುವ ಕ್ಷಿಪ್ರಗತಿಯಲ್ಲಿ ಏರುಪೇರಾಗುವ ತಕ್ಷಣದ ಸಂವೇದನೆ ಮತ್ತು ಭಾವನೆಗಳ ಪ್ರಪಂಚವನ್ನು ಬಯಲುಗೊಳಿಸಿತು. ಈ ವಿಧಾನದಿಂದ ಮತ್ತೂ ತಿಳಿದು ಬಂದ ವಿಚಾರವೆಂದರೆ, ಅವರು ಅನುಭವಿಸುವ ಬಹುತೇಕ ಸಂಘರ್ಷಗಳು, ಭಾವನೆಗಳ ತೀವ್ರತೆ ಬಲವಾಗಿದ್ದರೂ, ಸಣ್ಣ ಹಾಗು ಕ್ಷುಲ್ಲಕ ವಿಚಾರಗಳ ಕುರಿತದ್ದೇ ಆಗಿದ್ದವು. ಬಹುಶಃ ಹಿರಿಯರು 'ಕ್ಷುಲ್ಲಕ'ವೆಂದು ಭಾವಿಸುವ ಎಷ್ಟೋ ವಿಚಾರಗಳನ್ನು ಹದಿಹರೆಯದವರು ಬಹುಮುಖ್ಯ ವಿಷಯುಗಳೆಂದು ಭಾವಿಸುವುದೇ ಸಂಘರ್ಷದ ಮುಖ್ಯ ಮೂಲವಾಗಿದೆ.

ಹದಿಹರೆಯವನ್ನು ಕುರಿತ ಸಾಂಸ್ಕೃತಿಕ ಮತ್ತು ಜನಪ್ರಿಯ ಪೂರ್ವಗ್ರಹಗಳು ಹಾಗು ನಾನಾ ಸಂಶೋಧನಾ ವಿಧಾನಗಳಲ್ಲಿನ ಸಮಸ್ಯೆಗಳ ಅರಿವಿನೊಂದಿಗೆ, ಈ ಕ್ಷೇತ್ರದಲ್ಲಿ ನಡೆಸಿದ ಸಂಶೋಧನೆಗಳ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಲು ನಾವು ಉತ್ತಮವಾಗಿ ಸಜ್ಜುಗೊಳ್ಳುತ್ತೇವೆ.

ಬದಲಾವಣೆಯ ಕುರಿತೆಲ್ಲ

ಹದಿಹರೆಯದ ಮನೋವಿಜ್ಞಾನದ ಬೃಹತ್ ಸೂರಿನಡಿಯಲ್ಲಿ, ಒಂದರೊಳಗೊಂದು ಬೆಸೆದುಕೊಂಡಿರುವ ಸಾಕಷ್ಟು ವಿಷಯಗಳು ಬರುತ್ತವೆ. ಇವೆಲ್ಲವೂ ಬದಲಾವಣೆಗೆ ಸಂಬಂಧಿಸಿದ್ದು, ಬದಲಾವಣೆ ಜೀವನದ ಈ ಹಂತದ ಅತ್ಯಂತ ಮುಖ್ಯ ಪದವೆಂದು ಕಾಣುತ್ತದೆ. ಇಡೀ ಬಾಲ್ಯವು ಜೀವನದ ಅಗಾಧ ಬೆಳವಣಿಗೆ ಮತ್ತು ಬದಲಾವಣೆಯ ಹಂತವೆಂಬುದೇನೋ ನಿಜ. ಜೊತೆಗೇ ನಾವು ವಯಸ್ಕರರೂ ಬದಲಾಗುತ್ತಿದ್ದು, ಜಡತೆಯಿಂದ ಕೂಡಿಲ್ಲ ಎಂದು ಭಾವಿಸಲು ಬಯಸುತ್ತೇವೆ! ಹಾಗಿದ್ದೂ ಬದಲಾವಣೆಗಳ ತೀವ್ರತೆ ಮತ್ತು ಅನಿಯಮಿತತೆ ಮಾತ್ರವೇ ಹದಿಹರೆಯವನ್ನು ವಿಶೇಷವಾಗಿ ಒಂದು ವಿಶಿಷ್ಟ ಬೆಳವಣಿಗೆಯ ಹಂತವನ್ನಾಗಿ ರೂಪಿಸಿವೆ. ಹದಿಹರೆಯದ ಗುಣಲಕ್ಷಣಗಳ ಈ ಕೆಳಗಿನ ಪಟ್ಟಿಯನ್ನು ಗಮನಿಸಿ, ಅದನ್ನು ತಿಳಿದುಕೊಳ್ಳಬಹುದು:

- ದೈಹಿಕವಾಗಿ ಆಗುವ ಹಾರ್ಮೋನು ಮತ್ತು ಇತರ ರಾಸಾಯನಿಕ ಬದಲಾವಣೆಗಳು
- ದೈಹಿಕವಾಗಿ ಇದ್ದಕ್ಕಿದ್ದಂತೆ ಆಗುವ ಹಾಗು ಬೇರೆಯವರಿಗೆ ಗೋಚರಿಸುವ, ಲೈಂಗಿಕ ಪಕ್ವತೆಯನ್ನು ಸೂಚಿಸುವ ಬದಲಾವಣೆಗಳು
- ಹೆಚ್ಚಿದ ಉತ್ಸಾಹ, ಆತಂಕ, ಲವಲವಿಕೆ, ಖಿನ್ನತೆಗಳೇ ಮೊದಲಾದ ಭಾವನಾತ್ಮಕ ಬದಲಾವಣೆಗಳು
- ಸಂಘರ್ಷ, ಆಕ್ರಮಣಕಾರಿತನ, ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವುದು, ರೋಮಾಂಚನವನ್ನು ಹುಡುಕಿ ಹೊರಡುವಂತಹ ಹೊಸ ವರ್ತನೆಗಳು
- ಸ್ವಗುರುತಿನ (identity) ಭಾವನೆಯ ಬಯಕೆ, ಹಿರಿಯರು ಚಲಾಯಿಸುವ ಅಧಿಕಾರದ ವಿರುದ್ಧ ತಿರುಗಿಬೀಳುವುದು, ಪ್ರಣಯಾಸಕ್ತಿ ಇರುವುದು, ಹೆಚ್ಚಾದ ಸ್ವಪ್ರಜ್ಞೆ, ಸಹವರ್ತಿಗಳ ಮೇಲೆ ಹೆಚ್ಚಿನ ಅವಲಂಬನೆ, ಇವೇ ಮೊದಲಾದ ಹೊಸ ಮಾನಸಿಕ ಸಮಸ್ಯೆಗಳು
- ಹೆಚ್ಚು ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಬಯಸುವ, ಮತ್ತು ಪಡೆಯುವ ಸಾಮಾಜಿಕ ಬದಲಾವಣೆಗಳು
- ಉನ್ನತ ಮಟ್ಟದ ಕಲಿಕೆ ಮತ್ತು ಅರ್ಥಮಾಡಿಕೊಳ್ಳುವಿಕೆಗೆ ಅನುವು ಮಾಡಿಕೊಡುವ ಜ್ಞಾನಗ್ರಹಿಕೆಯಲ್ಲಿನ ಪರಿಮಾಣಾತ್ಮಕ ಅಥವಾ ಗುಣಾತ್ಮಕ ಬದಲಾವಣೆಗಳು

ಹಾರ್ಮೋನು ಮತ್ತು ದೈಹಿಕ ಬದಲಾವಣೆಗಳು ಹಾಗು ಅವು ಸೂಚಿಸುವ ಲೈಂಗಿಕ ಜಾಗೃತಿಗಳೆಲ್ಲವೂ ಪ್ರಬಲ ಬಲ ಸಮೂಹಗಳಾಗಿರುತ್ತವೆ. ಇವು ಹದಿಹರೆಯದ ಸಾರ್ವತ್ರಿಕ ದೈಹಿಕ ಗುರುತುಗಳು. ಅವರಿಗಿರುವ ಭಾವನಾತ್ಮಕ ಹಾಗು ವರ್ತನೆಗಳಿಗೆ ಸಂಬಂಧಿಸಿದ ಪರಿಣಾಮಗಳು ಬಹುಮಟ್ಟಿಗೆ ಎಲ್ಲ ಸಂಸ್ಕೃತಿಗಳಲ್ಲೂ ಒಂದೇ ಆಗಿರುವುದನ್ನು ನಿರೀಕ್ಷಿಸಬಹುದು. ಹದಿಹರೆಯದಲ್ಲಿ, ಏಕಾಗ್ರತೆಯಲ್ಲಿನ ಸರಾಸರಿ ಹೆಚ್ಚಳ ಮತ್ತು ಆವರ್ತನೆಯಲ್ಲಿನ ವ್ಯತ್ಯಯಗಳ ಮೂಲಕ ಹಾರ್ಮೋನುಗಳು ತಮ್ಮ ಪ್ರಭಾವವನ್ನು ಹೊರಚೆಲ್ಲುತ್ತವೆ. ಜಾಕೆಲೀನ್ ಎಕ್ಲೆಸ್ ಮತ್ತು ಅವರ ಸಹೋದ್ಯೋಗಿಗಳು, ಈ

ಪ್ರಭಾವಗಳ ಅತ್ಯಂತ ಕೂಲಂಕಷ ವಿವರಣೆಯನ್ನು 1992ರಲ್ಲಿ ಪ್ರಕಟಿಸಿದರು. ಎಕ್ಲೆಸ್ ಅವರು, ನಾನು ಈ ಮೊದಲು ಹೇಳಿದ 'ಋಣಾತ್ಮಕತೆಯ' ಪೂರ್ವಗ್ರಹವಿಲ್ಲದೆಯೇ ಹಲವು ವೈವಿಧ್ಯಮಯ ಅಂಶಗಳನ್ನು ಅಭ್ಯಸಿಸಿರುವ ಮನೋವಿಜ್ಞಾನಿಯಾಗಿದ್ದಾರೆ. 1992ರಲ್ಲಿ ಪ್ರಕಟವಾದ ಅವರ ಲೇಖನ ಆರಂಭವಾಗುವುದೇ ಹೀಗೆ: '. . . . ಹದಿಹರೆಯದಲ್ಲಿ ಅನಿವಾರ್ಯವೆಂಬಂತೆ ಸಮಸ್ಯೆ ಉದ್ಭವಿಸುವುದಿಲ್ಲ.' ಹಾಗಿದ್ದೂ ಹದಿಹರೆಯಕ್ಕೆ ಸಂಬಂಧಿಸಿದ ಯಾವ ವಿಷಯಗಳನ್ನು ಸಾಮಾನ್ಯವಾಗಿ ಇಲ್ಲಿ ಚರ್ಚಿಸಲಾಗಿದೆ ಎಂದು ನಿಮಗೆ ಹೇಳಬೇಕೆಂದರೆ, ಈ ಅಧ್ಯಾಯದ ಉಪಶೀರ್ಷಿಕೆಗಳನ್ನು ಗಮನಿಸಿ: 'ಯೋಚನಾಲಹರಿಯ ತೊಯ್ದಾಟಗಳು ಮತ್ತು ಅದರ ತೀವ್ರತೆ', 'ಖಿನ್ನತೆ', 'ಸಾಮರ್ಥ್ಯದ ಮಟ್ಟ', 'ಚಡಪಡಿಕೆ ಮತ್ತು ಏಕಾಗ್ರತೆ', 'ಹಠಾತ್ ಪ್ರವೃತ್ತಿ', 'ಆತಂಕ', 'ಆಕ್ರಮಣಕಾರಿತನ ಮತ್ತು ವರ್ತನಾ ಸಮಸ್ಯೆಗಳು', 'ಸ್ವಪ್ರಜ್ಞೆ'! ಈ ಅಧ್ಯಾಯವು ಈ ಎಲ್ಲಾ ವಿದ್ಯಮಾನಗಳಿಗೆ ಹಾರ್ಮೋನುಗಳು ಮೂಲವಾಗಿರುವುದಕ್ಕೆ ಇರುವ ಪುರಾವೆಗಳನ್ನು ಪರಿಶೀಲಿಸುತ್ತದೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಹಾರ್ಮೋನುಗಳು ಪ್ರತ್ಯಕ್ಷ ಹಾಗು ಪರೋಕ್ಷ ಪಾತ್ರಗಳೆರಡನ್ನೂ ನಿರ್ವಹಿಸುತ್ತವೆ ಹಾಗು ಆ ಪ್ರಭಾವಗಳಿಗೆ ಹಲವು ದಾರಿಗಳಿರುವ ಸಾಧ್ಯತೆ ಇದೆ. ಮುಂದಿನ ಎರಡು ಪ್ಯಾರಾಗಳು ಅಧ್ಯಯನದ ನಿರ್ಣಯಗಳ ಸಾರಾಂಶವನ್ನು ನೀಡುತ್ತವೆ.

ಹದಿಹರೆಯದಲ್ಲಿನ ದೈಹಿಕ ಬದಲಾವಣೆಗಳು ಕೆಲವು ವರ್ತನೆಗಳಿಗೆ ದಾರಿ ಮಾಡಿಕೊಡಬಹುದು. ಉದಾಹರಣೆಗೆ, ಹುಡುಗರಲ್ಲಿ ಹೆಚ್ಚಿದ ಶಕ್ತಿಯು, ತಾವು ಬಯಸಿದ್ದನ್ನು ಪಡೆಯಲು ಆಕ್ರಮಣಕಾರಿ ವರ್ತನೆ ಬಳಸುವಂತೆ ಪ್ರೇರೇಪಿಸಬಹುದು. ಹಾರ್ಮೋನುಗಳ ಬದಲಾವಣೆಯು (ಟೆಸ್ಟೋಸ್ಟೆರೋನ್ ಮತ್ತು ಈಸ್ಟ್ರೋಜನ್) ಇಂದ್ರಿಯಗಳನ್ನು ಹೆಚ್ಚು ಚುರುಕು ಮತ್ತು ಎಚ್ಚರಿಕೆಯಿಂದಿರುವಂತೆ ಮಾಡಬಲ್ಲವು. ಇದು ಅತ್ಯಂತ ಸುಸ್ಥಿತಿ (ಹೆಚ್ಚೂ ಕಡಿಮೆ 'ಉತ್ಕೃಷ್ಟ' ಎನ್ನಿಸುವಂತಹ) ಭಾವವನ್ನು ಉಂಟುಮಾಡಬಹುದು. ಇನ್ನೊಂದೆಡೆ ನೋವಿನ ಪ್ರಚೋದಕಗಳಿಗೆ ಹೆಚ್ಚು ಸಂವೇದನಾಶೀಲತೆಯುಂಟಾಗಿ ರೇಗುವಿಕೆ ಮತ್ತು ಕೋಪ ಕಾಣಿಸಿಕೊಳ್ಳಬಹುದು. ಹಾರ್ಮೋನುಗಳ ಹೆಚ್ಚಳವು ಪ್ರಚೋದನೆಗೆ ಹೆಚ್ಚು ಸಿದ್ಧ ಹಾಗು ಶೀಘ್ರ ಪ್ರತಿಸ್ಪಂದನೆಗೆ ಎಡೆಮಾಡಿಕೊಡುತ್ತದೆ. ಇದರಿಂದಾಗಿ, ಬೇರೆಬೇರೆ ಸಂದರ್ಭಗಳಲ್ಲಿ ತಕ್ಷಣ ಸಿಡುಕುವ ಅಥವಾ ಹಗುರವಾಗಿ ನಕ್ಕುಬಿಡುವ ಸ್ವಭಾವಗಳೂ ಕಾಣಿಸಿಕೊಳ್ಳಬಹುದು. ಮೂಲದ ಚಯಾಪಚಯದ ಗತಿಯಲ್ಲಿನ ಏರುಪೇರುಗಳು ಅಥವಾ ಸ್ವನಿಯಂತ್ರಿತ ಪ್ರತಿಕ್ರಿಯಾಶೀಲತೆಗಳಿಂದಾಗಿ (autonomic reactivity) ಒಮ್ಮೆ ಕ್ರಿಯಾಶೀಲ ಭಾವಗಳಿಗೆ ಎಡೆ ಮಾಡಿಕೊಟ್ಟರೆ ಮತ್ತೆ ಕೆಲವೊಮ್ಮೆ ಉತ್ಸಾಹಶೂನ್ಯ ಭಾವಕ್ಕೆ ಎಡೆ ಮಾಡಿಕೊಡಬಹುದು. ಅಲ್ಲದೇ ಕೊನೆಯದಾಗಿ, ಹಾರ್ಮೋನುಗಳು ಹದಿಹರೆಯದವರನ್ನು ನಿಜಕ್ಕೂ ಪರೋಕ್ಷವಾಗಿ ಬಾಧಿಸಬಹುದು. ಉದಾಹರಣೆಗೆ ಅವರು ಮತ್ತು ಅವರ ಸುತ್ತಲಿನವರು ಸಂಕ್ಷೋಭೆ ಮತ್ತು ಒತ್ತಡ ಉಂಟಾಗುವುದೇ ಹಾರ್ಮೋನುಗಳಿಂದ ಎಂದು ನಂಬತೊಡಗಿದರೆ, ಅದೇ ಸ್ವಯಂತೃಪ್ತಿಯ ಧ್ಯೇಯ ವಾಕ್ಯವಾಗಬಹುದು. ಹೀಗಾಗಿ, ಹಲವಾರು ಸಂದರ್ಭಗಳಲ್ಲಿ ಯೋಚನಾಲಹರಿ ಮತ್ತು ವರ್ತನೆಯಲ್ಲಿನ ಸಣ್ಣ ಬದಲಾವಣೆಗಳನ್ನೂ 'ಹದಿಹರೆಯದ ಹಾರ್ಮೋನುಗಳು' ಎಂದು ಕರೆಯಬಹುದು.[24]

24 ಹಾರ್ಮೋನುಗಳ ಏರುಪೇರು ಹದಿಹರೆಯದವರನ್ನು ಮನೋರೋಗಿಗಳನ್ನಾಗಿಸುವ ಸಾಧ್ಯತೆಯನ್ನು ಹೆಚ್ಚಿಸಬಹುದು ಅಥವಾ ಸ್ಪರ್ಧಾತ್ಮಕ ಶೈಕ್ಷಣಿಕ ಪರೀಕ್ಷೆಗಳಲ್ಲಿ ಪಾರಿಣಾಮಿಕ ಒತ್ತಡಕಾರಕಗಳಿಗೆ ಎಡೆ ಮಾಡಿಕೊಡಬಹುದು. ಇದು ಖಿನ್ನತೆಗೆ ದಾರಿಮಾಡಿಕೊಡಬಹುದು ಮತ್ತು ಅತಿರೇಕದ ಸಂದರ್ಭದಲ್ಲಿ ಆತ್ಮಹತ್ಯೆಯತ್ತಲೂ ಹೊರಳಬಹುದು.

ಇವೆಲ್ಲ ನಡೆಯುತ್ತಿರುವಾಗಲೇ, ಹಾರ್ಮೋನಿಗೆ ಸಂಬಂಧಿಸದ ಅಂಶಗಳಾದ ಶಾಲೆ ಮತ್ತು ಕೌಟುಂಬಿಕ ಪರಿಸರಗಳು, ಹಾಗು ಅಲ್ಲಿನ ಮನೋಧರ್ಮಗಳು ಕೂಡ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಅಧ್ಯಯನಗಳಿಂದ ದೃಢಪಟ್ಟಂತೆ, ಅಧಿಕ ಟೆಸ್ಟೋಸ್ಟೆರೋನ್ ಮಟ್ಟಗಳು ನಿರಾಶೆಯನ್ನು ತಾಳಿಕೊಳ್ಳುವ ಸಾಮರ್ಥ್ಯವನ್ನು ಕಡಿಮೆ ಮಾಡಬಹುದು. ಅಂದರೆ ಪ್ರಚೋದಿಸಿದಾಗ ಹೆಚ್ಚು ಆಕ್ರಮಣಕಾರಿ ವರ್ತನೆಗೆ ದಾರಿಮಾಡಿಕೊಡಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹೆಚ್ಚಿನ ಮಟ್ಟದ ಟೆಸ್ಟೋಸ್ಟೆರೋನ್ ಹೊಂದಿರುವ ಹುಡುಗನೊಬ್ಬ ಅಪರೂಪಕ್ಕೆ ಪ್ರಚೋದನೆಗೆ ಒಳಗಾದರೆ ಅಥವಾ ಎಂದೂ ಪ್ರಚೋದನೆಗೆ ಒಳಗಾಗದಿದ್ದರೆ, ಅವನು ಎಂದೂ ಆಕ್ರಮಣಕಾರಿ ಪ್ರವೃತ್ತಿಯನ್ನೇ ತೋರದಿರಬಹುದು. ಇಲ್ಲಿ ಹಾರ್ಮೋನಿನ ಪರಿಣಾಮವನ್ನು ನಿಯಂತ್ರಿಸುವಲ್ಲಿ ಭಯರಹಿತ ಪರಿಸರ ಸಹಕಾರಿಯಾಗಿದೆ. ಇದೇ ರೀತಿ, ಹಾರ್ಮೋನುಗಳಲ್ಲಿನ ಬದಲಾವಣೆಗಳು ಖಿನ್ನತೆಯ ಮೇಲೂ ಪ್ರಭಾವ ಬೀರುತ್ತವೆ, ಆದರೆ ಈ ಪರಿಣಾಮವು ಮಾನಸಿಕವಾಗಿ ಸಂಕಷ್ಟಕ್ಕೊಳಗಾಗುವಂತಹವರು (vulnerable) ಅಥವಾ ಒತ್ತಡಪೂರ್ಣ ವಾತಾವರಣದಲ್ಲಿರುವ ಹದಿಹರೆಯದವರಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಒಂದು ಸ್ಥಿರ ಹಾಗು ಸಮಗ್ರ ಸ್ವವ್ಯಕ್ತಿತ್ವದ (integrated identity) ಹುಡುಕಾಟವೇ ಹದಿಹರೆಯದವರ ಸಾರ್ವಕಾಲಿಕ ತುಡಿತ. ತಾವು ಭಿನ್ನ ಸಂದರ್ಭಗಳಲ್ಲಿ ಭಿನ್ನವಾಗಿ ಏಕೆ ವರ್ತಿಸುತ್ತೇವೆ ಎಂಬುದರ ಮನಗಾಣುವಿಕೆಯಲ್ಲಿಯೇ ಅದರ ಮೂಲವಿರುವುದು ('ಛೇ, ನಾನೇಕೆ ಹಾಗೆ ಮಾಡಿದೆ, ಇದು ನನ್ನ ರೀತಿ ಅಲ್ಲ' ಅಥವಾ 'ನಾನಂತೂ ನಾನಾಗಿಯೇ ಇರುತ್ತೇನೆ.' ಆದರೆ ಈ 'ನಿಜವಾದ ನಾನು ಯಾರು?'). ಪ್ರಸಿದ್ಧ ಮನೋವಿಜ್ಞಾನಿ, ಎರಿಕ್ ಎರಿಕ್‌ಸನ್ ಅವರ ಪ್ರಕಾರ, ಸ್ವವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಹದಿಹರೆಯದ ಬಹುಮುಖ್ಯ ಕ್ರಿಯೆ. 'ಹಲವು ಸ್ವವ್ಯಕ್ತಿತ್ವಗಳ' (multiple selves) ಭಾವನೆಗಳಿದ್ದೂ, ಒಬ್ಬರ ವ್ಯಕ್ತಿತ್ವದ ನಿರಂತರತೆ ಮತ್ತು ಏಕರೂಪತೆಯೇ ಸ್ವವ್ಯಕ್ತಿತ್ವವಾಗಿರುತ್ತದೆ. ಅದು ತನ್ನ ಬಗೆಗಿನ ನಂಬಿಕೆಗಳ ಒಂದು ಸಮೂಹ ಕೂಡ. ತಾನೆಷ್ಟು ಬೇರೆಯವರಂತೆ ಇದ್ದೇನೆ ಮತ್ತು ತಾನೆಷ್ಟು ಬೇರೆಯವರಿಗಿಂತ ಭಿನ್ನವೆನ್ನುವುದನ್ನೂ ಸ್ವವ್ಯಕ್ತಿತ್ವ ಒಳಗೊಂಡಿರುತ್ತದೆ. ಸ್ವವ್ಯಕ್ತಿತ್ವವನ್ನು ರೂಪುಗೊಳಿಸುವ ಪ್ರಕ್ರಿಯೆಯ ಕುರಿತಾದ ಎರಿಕ್‌ಸನ್ ಅವರ ವಿವರಣೆ ಸೂಚಿಸಿರುವಂತೆ, ಅದೊಂದು ಪ್ರಭಾವಿ ಸಂಕೀರ್ಣ ಕ್ರಿಯೆಯಾಗಿದೆ. ಯಾವುದೇ ಹದಿಹರೆಯದವರಿಗೆ ಅದು ನಾಲ್ಕು ಹಂತಗಳ ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ:

- ಬೇರೆಯವರ ಬಗ್ಗೆ ಅವರ ತೀರ್ಮಾನಗಳು
- ಅವರ ಬಗ್ಗೆ ಬೇರೆಯವರ ತೀರ್ಮಾನಗಳು
- ಬೇರೆಯವರ ತೀರ್ಮಾನಗಳ ಬಗ್ಗೆ ಅವರ ತೀರ್ಮಾನಗಳು
- ತೀರ್ಮಾನಗಳನ್ನು ತೆಗೆದುಕೊಳ್ಳಲು ಆಧಾರವಾಗುವ ಸಾಮಾಜಿಕ ಹಾಗು ಸಾಂಸ್ಕೃತಿಕ ಪರಿಪಾಠಗಳ ಕುರಿತು ಅವರಿಗಿರುವ ಜ್ಞಾನ!

ಇದನ್ನು ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಲು ಒಂದು ಉದಾಹರಣೆಯನ್ನು ನೋಡೋಣ. ತನ್ನ ಸಹಪಾಠಿಯೊಬ್ಬಳು ಹೋಂವರ್ಕ್ ಬಗ್ಗೆ ಸುಳ್ಳು ಹೇಳಿ ಸಿಕ್ಕಿ ಹಾಕಿಕೊಳ್ಳುವುದನ್ನು ಹದಿಮೂರು ವರ್ಷದವಳೊಬ್ಬಳು ನೋಡಿದಳೆಂದುಕೊಳ್ಳೋಣ. ಆಗ ಅವಳ ಮನಸ್ಸಿನಲ್ಲಿ ಹಲವು ಯೋಚನಾ ಸರಣಿಗಳು ಸುಳಿಯುತ್ತವೆ, ಉದಾಹರಣೆಗೆ, 'ಹೋಂವರ್ಕ್ ಬಗ್ಗೆ ಅವಳು ಸುಳ್ಳು ಹೇಳಿದ್ದು ಮೂರ್ಖ ಕೆಲಸ', 'ಅವಳು ಮೂರ್ಖಳಂತೆ ಸಿಕ್ಕಿಹಾಕಿಕೊಂಡಳು', 'ನಾನೇನಾದರೂ



ಸತ್ಯ ಹೇಳಿದರೆ ನನ್ನ ಗೆಳತಿಯರು ನನ್ನನ್ನು ಒಳ್ಳೆಯವಳು ಎಂದುಕೊಳ್ಳುತ್ತಾರಾ?', 'ನಾನು ಕಳೆದ ಕಿರುಪರೀಕ್ಷೆಯಲ್ಲಿ ನಕಲು ಮಾಡಿದೆನೆಂದು ಗೊತ್ತಾದರೆ, ನನ್ನ ಶಿಕ್ಷಕರು ನನ್ನನ್ನು ಕೆಟ್ಟವಳೆಂದು ಭಾವಿಸುತ್ತಾರಾ?' ಅಥವಾ ಒಬ್ಬ ಹದಿನಾಲ್ಕು ವರ್ಷ ವಯಸ್ಸಿನ ಹುಡುಗ ಹೊಸ ವಿದ್ಯಾರ್ಥಿಯೊಬ್ಬನನ್ನು ಗೆಳೆಯನನ್ನಾಗಿಸಿಕೊಂಡರೆ, ಬಹುಶಃ ಅವನು ಈ ರೀತಿ ಭಾವಿಸಬಹುದು: 'ನಾನು ಸ್ನೇಹಮಯಿಯೇ? ಈ ಹೊಸ ವಿದ್ಯಾರ್ಥಿಯೊಂದಿಗೆ ನಾನು ಒರಟಾಗಿ ವರ್ತಿಸಿದರೆ ಪರವಾಗಿಲ್ಲವೆ? ನಾನು ಈ ಹುಡುಗನ ಜೊತೆ ಚೆನ್ನಾಗಿರುವುದನ್ನು ನನ್ನ ಬೇರೆ ಸ್ನೇಹಿತರು ಇಷ್ಟಪಡದಿದ್ದರೆ, ಅದು ಅವರ ಸಮಸ್ಯೆ!'

ಹದಿಹರೆಯದವರು ತಮ್ಮ ಬಗ್ಗೆ ಹೊಂದಿರುವ ಭಾವನೆಯ ಮೇಲೆ ಅವರ ಪರಿಸರದಲ್ಲಿನ ಮೌಲ್ಯಗಳು ಮತ್ತು ಆಚರಣೆಗಳು ತೀವ್ರ ಪ್ರಭಾವ ಬೀರುತ್ತವೆ. ಇಲ್ಲಿ ಅವರ ಶಾಲೆ ಮಹತ್ವದ ಪಾತ್ರ ವಹಿಸುತ್ತದೆ. ನಿಮ್ಮ ಶಾಲೆ, ವಿದ್ಯಾರ್ಥಿಗಳಿಗೆ 'ಅದು ನಮ್ಮದು' ಎಂಬ ಮತ್ತು ಸುರಕ್ಷತೆಯ ಭಾವಗಳನ್ನು ನೀಡುತ್ತದೆಯೇ? ಲಭ್ಯವಿರುವ ಸಹಾಯವನ್ನು ಪಡೆದು ತನ್ನ ಪರಿಸರವನ್ನು ಪರಿಶೋಧಿಸುವ ಹಾಗು ಪ್ರಮುಖ ಚಟುವಟಿಕೆಯಲ್ಲಿ ಭಾಗವಹಿಸುವ ಅವಕಾಶವನ್ನು ನೀಡುತ್ತದೆಯೇ? ಇವಕ್ಕೆ ಬದಲಾಗಿ, ಪ್ರತ್ಯೇಕತಾ ಭಾವವನ್ನು ಪ್ರೋತ್ಸಾಹಿಸಿ, ವಿದ್ಯಾರ್ಥಿಯನ್ನು ವಿದ್ಯಾರ್ಥಿಗೆದುರಾಗಿಸಿ, ವಿದ್ಯಾರ್ಥಿಯನ್ನು ಶಿಕ್ಷಕನಿಗೆದುರಾಗಿಸಿ, ಪರಿಶೋಧನೆಯ ಪ್ರಯತ್ನಗಳನ್ನು ತಡೆದು, ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅಡ್ಡಿಪಡಿಸುತ್ತದೆಯೇ? ಓದುಗರೇ, ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವದ ಧನಾತ್ಮಕ ಪ್ರಾತಿನಿಧಿತ್ವವನ್ನು ಪಡೆಯಲು ಸಹಾಯಕವಾಗುವ ಪರಿಸರ ಯಾವುದು ಎಂದು ನೀವು ಊಹಿಸಿ ಹೇಳಿದರೆ ಅದೇನೂ ಬಹುಮಾನ ನೀಡಬೇಕಾದ ಉತ್ತರವಲ್ಲ. ಶಾಲಾ ಪರಿಸರ ಮತ್ತು ಅದರ ಪರಿಣಾಮಗಳನ್ನು ಕುರಿತ ವಿವರವಾದ ಚರ್ಚೆ ಮುಂದಿನ ಭಾಗದಲ್ಲಿದೆ.

ಹದಿಹರೆಯದ ಇನ್ನೊಂದು ಸರ್ವೇಸಾಮಾನ್ಯ ಹೆಣಗಾಟವೆಂದರೆ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದ ಹೆಚ್ಚಿನ ಅವಶ್ಯಕತೆ. ಇದು ಹಿರಿಯರೊಂದಿಗೆ ಸಂಘರ್ಷಕ್ಕೆಡೆ ಮಾಡಿಕೊಡುವ ಸಾಧ್ಯತೆಯೇ ಹೆಚ್ಚು. ಚಿಕ್ಕಮಕ್ಕಳು, ತಾವು ಎಷ್ಟು ಸ್ವಚ್ಛವಾಗಿದ್ದೇವೆ ಮತ್ತು ಹೇಗೆ ಕಾಣುತ್ತಿದ್ದೇವೆ ಎಂಬುದರಿಂದ ಹಿಡಿದು ತಮ್ಮ ಸಮಯವನ್ನು ಯಾರ ಜೊತೆ ಹೇಗೆ ಕಳೆಯಬೇಕು ಎನ್ನುವವರೆಗಿನ ವೈವಿಧ್ಯಮಯ ಸನ್ನಿವೇಶಗಳಲ್ಲೆಲ್ಲ ಹಿರಿಯರ ಅಧಿಕಾರವನ್ನು ಒಪ್ಪಿಕೊಳ್ಳುತ್ತಾರೆ. ಹದಿಹರೆಯದವರಿಗೆ ಇಲ್ಲಿನ ಎಷ್ಟೋ ಸನ್ನಿವೇಶಗಳು ನೈತಿಕ ಮತ್ತು ಸಾಂಪ್ರದಾಯಿಕ ಕ್ಷೇತ್ರಗಳಿಂದ **ವೈಯಕ್ತಿಕ ಕ್ಷೇತ್ರಕ್ಕೆ** ಆಗುತ್ತಿರುವ ಪಲ್ಲಟಗಳು (ಈ ಮೂರು ಕ್ಷೇತ್ರಗಳ ವಿವರಗಳಿಗಾಗಿ **ಅಧ್ಯಾಯ 6**ನ್ನು ನೋಡಿ). ಹಾಗೆ ನೋಡಿದರೆ, ಬರಬರುತ್ತಾ ಒಬ್ಬ ವಯಸ್ಕ ತನ್ನೆಲ್ಲ ಕ್ರಿಯೆ ಮತ್ತು ನಿರ್ಧಾರಗಳು (ಬಹುಶಃ, ಕಾನೂನನ್ನು ಮುರಿಯುವ ಕ್ರಿಯೆಗಳನ್ನು ಹೊರತುಪಡಿಸಿ) ತನ್ನನ್ನು ಬಿಟ್ಟು ಬೇರಾರಿಗೂ ಸಂಬಂಧಿಸಿಲ್ಲವೆಂದು ಭಾವಿಸುತ್ತಾನೆ. ಹೆಚ್ಚೂ ಕಡಿಮೆ, ಪ್ರತಿಯೊಂದಕ್ಕೂ ಹಿರಿಯರಿಗೆ ಋಣಿಯಾಗಿ

ಉತ್ತರಿಸುವ ಹೊಣೆಗಾರಿಕೆಯಿಂದ ಆರಂಭಿಸಿ ಬಹುತೇಕ ತನಗೆ ತಾನೇ ಉತ್ತರಿಸುವ ಹೊಣೆಗಾರಿಕೆಯ ಸ್ಥಿತಿಗಳವರೆಗೆ ಆಗುವ ಪಲ್ಲಟ ಹಂತಹಂತವಾಗಿಯೇ ನಡೆಯಬೇಕು. ಈ ಸ್ಥಿತ್ಯಂತರದ ಅವಧಿಯೇ, ಹದಿಹರೆಯ.

ಈ ಸಂದರ್ಭದಲ್ಲಿ ಭಾರತದ ಹದಿಹರೆಯದವರನ್ನು ಕುರಿತು ಒಂದಷ್ಟು ಮಾಹಿತಿ ಇರಬೇಕೆಂದು ನಾವು ಬಯಸುತ್ತೇವೆ, ಅದರಲ್ಲೂ ಇಲ್ಲಿನ ಭಿನ್ನ ವರ್ಗಗಳ, ಭಿನ್ನ ಧರ್ಮಗಳ ಹಾಗು ನಗರ-ಗ್ರಾಮೀಣ ಪರಿಸರಗಳ ಭಾರತೀಯ ಹದಿಹರೆಯದವರ ಕುರಿತ ಪ್ರತ್ಯೇಕ ಮಾಹಿತಿ ಬೇಕಾಗಬಹುದು. ಭಾರತದ ಸಂದರ್ಭಕ್ಕೆ ಅನ್ವಯಿಸಿಕೊಳ್ಳಬಹುದಾದ ಒಂದು ಮಿಶ್ರ ಸಂಸ್ಕೃತಿ (cross cultural) ಅಧ್ಯಯನವೊಂದರಲ್ಲಿ ಆ್ಯಂಡ್ರ್ಯೂ ಫುಲಿನಿ ಅವರು, 'ನಿಮ್ಮ ಪೋಷಕರು ವಿವಿಧ ಸಂದರ್ಭಗಳಲ್ಲಿ ನಿಮಗೆ ನಿಯಮಗಳನ್ನು ರೂಪಿಸುವುದು 'ಸರಿಯೇ' ಅಥವಾ 'ಸರಿಯಲ್ಲವೇ'? ಎಂದು ನಾಲ್ಕು ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯ ಅಮೆರಿಕದ ಹದಿಹರೆಯದವರನ್ನು (ಫಿಲಿಪೀನ್ಸ್, ಚೈನಾ, ಮೆಕ್ಸಿಕೊ ಮತ್ತು ಯೂರೋಪಿನಿಂದ ವಲಸೆ ಬಂದವರ ಮಕ್ಕಳು) ಕೇಳಿದರು. ಆ ಸಂದರ್ಭಗಳೆಂದರೆ, ವಾರಾಂತ್ಯಗಳಲ್ಲಿ ತಡವಾಗಿ ಮಲಗುವುದು, ದೂರವಾಣಿಯಲ್ಲಿ ಮಾತನಾಡುವುದು, ಸಣ್ಣಪುಟ್ಟ ಕೆಲಸಗಳನ್ನು ಮಾಡುವುದು, ತಮ್ಮ ಚಟುವಟಿಕೆಗಳ ಕುರಿತು ಪೋಷಕರಿಗೆ ತಿಳಿಸುವುದು, ಹೇಗೆ ಉಡುಪು ಧರಿಸಬೇಕು, ಯಾವ ಸ್ನೇಹಿತರ ಜೊತೆ ಸೇರಬಹುದು ಹಾಗು ತಮ್ಮ ಕೊಠಡಿಗಳನ್ನು ಸ್ವಚ್ಛಗೊಳಿಸಿಕೊಳ್ಳುವುದು, ಇಂತಹವಾಗಿದ್ದವು. ಭಿನ್ನ ಸಂಸ್ಕೃತಿಯ ಮಕ್ಕಳು ಪೋಷಕರ ಅಧಿಕಾರಕ್ಕೆ ಬೆಲೆ ಕೊಡುವಲ್ಲಿ ಮತ್ತು ವೈಯಕ್ತಿಕತೆಗೆ ಬೆಲೆ ಕೊಡದಿರುವುದರಲ್ಲಿ ಐರೋಪ್ಯ ಮಕ್ಕಳಿಗಿಂತ ಕೊಂಚ ಭಿನ್ನವಾಗಿಯೇ ಉತ್ತರಿಸಬಹುದು ಎಂಬ ನಿರೀಕ್ಷೆಯಲ್ಲೇ ಫುಲಿನಿಯವರು ಈ ಜನಾಂಗೀಯ ಗುಂಪುಗಳನ್ನು ಆರಿಸಿಕೊಂಡಿದ್ದರು. ಆದರೆ ಅವರಿಗೆ ಅಚ್ಚರಿಯಾಗುವ ರೀತಿಯಲ್ಲಿ ಈ ಗುಂಪುಗಳ ನಡುವೆ ಇದ್ದ ವ್ಯತ್ಯಾಸಗಳು ತೀರಾ ನಗಣ್ಯವಾಗಿದ್ದವು. ನಾಲ್ಕೂ ಗುಂಪುಗಳಲ್ಲಿಯೂ ಅವರಿಗೆ ಒಂದೇ ರೀತಿಯ ಬೆಳವಣಿಗೆಯ ಮಾದರಿಗಳು ಕಂಡುಬಂದವು. ವಯಸ್ಸು ಹೆಚ್ಚಾದಂತೆಲ್ಲ ಹಲವಾರು ವಿಷಯಗಳನ್ನು 'ಖಾಸಗಿ' ಎಂದು ಪರಿಗಣಿಸಿದ್ದು ಅಲ್ಲಿ ಹೆಚ್ಚಿತ್ತು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಸಾಕಷ್ಟು ವಿಷಯಗಳಲ್ಲಿ ಪೋಷಕರು ನಿಯಮಗಳನ್ನು ರೂಪಿಸುವುದು ಬಹುತೇಕ 'ಸರಿಯಲ್ಲ' ಎಂಬ ಅಭಿಪ್ರಾಯವೇ ವ್ಯಕ್ತವಾಗಿತ್ತು. ಫುಲಿನಿಯವರು, ತಮ್ಮ ಅಧ್ಯಯನದ ಫಲಿತಾಂಶಗಳನ್ನು ಒಂದು ವಾಕ್ಯದಲ್ಲಿ ಹೀಗೆ ಸಾರಾಂಶೀಕರಿಸುತ್ತಾರೆ; 'ವೈಯಕ್ತಿಕ ಸ್ವಾಯತ್ತತೆಯ ಮೇಲೆ ಸಾಂಪ್ರದಾಯಿಕವಾಗಿ ಪೋಷಕರ ಅಧಿಕಾರಕ್ಕೆ ಪ್ರಾಧಾನ್ಯತೆ ನೀಡುವ ಗುಂಪುಗಳಲ್ಲಿಯೂ ಕೂಡ ಹದಿಹರೆಯದವರ ವಯಸ್ಸು ಹೆಚ್ಚಾದಂತೆ ಮಕ್ಕಳು ತಮ್ಮ ಪೋಷಕರ ಅಧಿಕಾರದ ವ್ಯಾಪ್ತಿಯನ್ನು ಮಿತಿಗೊಳಿಸಲು ಹೆಚ್ಚು ಬಯಸುತ್ತಾರೆ'.

ಅಂತಿಮವಾಗಿ, ನಾವು ಹದಿಹರೆಯವನ್ನು ವ್ಯಾಖ್ಯಾನಿಸುವ ಜ್ಞಾನಗ್ರಹಿಕೆಗೆ ಸಂಬಂಧಿಸಿದ ಬದಲಾವಣೆಗಳಿಗೆ ಬರೋಣ. ಅಮೂರ್ತೀಕರಣ ಸಾಮರ್ಥ್ಯದ ಏಕಾಏಕಿ ಹೆಚ್ಚಳವನ್ನು ಪಿಯಾಜೆ ಅವರ ವಿಕಾಸ ಸಿದ್ಧಾಂತವು ಪ್ರತಿಪಾದಿಸುತ್ತದೆಯಾದರೂ, ಹಲವಾರು ದಶಕಗಳ ಸಂಶೋಧನೆಗಳು, ವಿವಿಧ ರೀತಿಯ ಮೂಲಭೂತ ಸಾಮರ್ಥ್ಯಗಳಲ್ಲಿನ ಬದಲಾವಣೆಗಳು ಹಂತಹಂತವಾಗಿ ಆಗುತ್ತವೆ ಎಂಬತ್ತ ಬೊಟ್ಟು ಮಾಡಿವೆ. ಮಗುವಿನ ವಿಕಾಸವನ್ನು ಕುರಿತ **ಅಧ್ಯಾಯ 4**ರಲ್ಲಿ, ಇಂದು ಹಲವು ಮನೋವಿಜ್ಞಾನಿಗಳು, ಜ್ಞಾನಗ್ರಹಿಕೆಯ ಬೆಳವಣಿಗೆಯ ಹೆಚ್ಚು ನಿರಂತರತೆಯುಳ್ಳ ಕ್ರಮಾನುಗತ ಚಿತ್ರಣವನ್ನು ಪ್ರತಿಪಾದಿಸುತ್ತಿರುವುದು ನಿಮಗೆ ನೆನಪಿರಬಹುದು. ಕಾರ್ಯನಿರತ ಜ್ಞಾಪಕಶಕ್ತಿ, ಸಂಸ್ಕರಣೆಯ ವೇಗ, ದೀರ್ಘಾವಧಿ ಜ್ಞಾನದ ಪ್ರಮಾಣ ಮತ್ತು ಆಯೋಜನೆ (ಕ್ರಮಬದ್ಧ

ಜೋಡಣೆ), ಹಾಗು ಅಧಿಜ್ಞಾನಗ್ರಹಣ (metacognition) ಇವುಗಳಲ್ಲಿನ ಬೆಳವಣಿಗೆಗಳನ್ನು ನೋಡಬಹುದು. ಇವು ಹದಿಹರೆಯದಲ್ಲಿ ನಿರಂತರವಾಗಿ ಉತ್ತಮಗೊಳ್ಳುತ್ತಾ ಹೋಗುತ್ತವೆ. ಪಿಯಾಜೆ ಅವರ ಪ್ರಸಿದ್ಧ ಚಟುವಟಿಕೆಯು ಬೀಕರುಗಳಲ್ಲಿ ರಾಸಾಯನಿಕಗಳನ್ನು, ಜೊತೆಗೊಂದು ಪರೀಕ್ಷಕವನ್ನು (tester) ಒಳಗೊಂಡಿತ್ತು. ಆ ಪರೀಕ್ಷಕವು ಒಂದು ನಿರ್ದಿಷ್ಟ ರಾಸಾಯನಿಕಗಳ ಸಂಯೋಗವಾದಾಗ ಮಾತ್ರ ಹಳದಿ ಬಣ್ಣಕ್ಕೆ ತಿರುಗುತ್ತಿತ್ತು. ಸರಣಿ ಪ್ರಯತ್ನಗಳ ಮೂಲಕ ಆ ಸಂಯೋಗವನ್ನು ಕಂಡು ಹಿಡಿಯುವುದು ಮಗುವಿನ ಕೆಲಸವಾಗಿತ್ತು. ಈ ಚಟುವಟಿಕೆಯನ್ನು ಬಳಸಿ ಸುಮಾರು ಹದಿನೆರಡು ವರ್ಷಕ್ಕೂ ಕಡಿಮೆ ವಯಸ್ಸಿನ ಮಗು ಕ್ರಮಬದ್ಧವಾಗಿರದ ಮತ್ತು ತನಗೆ ತೋಚಿದ ರೀತಿಯಲ್ಲಿ ಪ್ರಯತ್ನಗಳನ್ನು ಮಾಡುತ್ತಾ, ಕೆಲವು ಸಂಯೋಗಗಳನ್ನು ಕೈ ಬಿಡುತ್ತಾ, ಮತ್ತೆ ಕೆಲವನ್ನು ಪುನರಾವರ್ತಿಸುವುದನ್ನು ಅವರು ಕಂಡುಕೊಂಡರು. ಹೀಗಾಗಿ, ರಾಸಾಯನಿಕಗಳಲ್ಲಿ ಎರಡರ ಹಾಜರಿ ಇನ್ನೊಂದರ ಗೈರುಹಾಜರಿಯ ಆವಶ್ಯಕತೆ ಇರುವ ನಿರ್ದಿಷ್ಟ ರಾಸಾಯನಿಕಗಳ ಸಂಯೋಗವನ್ನು ಕಂಡುಹಿಡಿಯಲಾಗಲಿಲ್ಲ. ಆದರೆ ಹನ್ನೆರಡು ವರ್ಷಕ್ಕಿಂತ ಹಿರಿಯ ಮಕ್ಕಳು ವ್ಯವಸ್ಥಿತ ಯೋಜನೆಯನ್ನು ಮಾಡಲು ಪ್ರಾರಂಭಿಸಿ, ಯಾವುದೇ ಪುನರಾವರ್ತನೆಗಳಿಲ್ಲದೇ ಎಲ್ಲಾ ಹದಿನೈದು ಸಂಯೋಗಗಳನ್ನು ಕ್ರಮಾನುಗತಿಯಲ್ಲಿ ಪ್ರಯತ್ನಿಸಿದರು. ಈ ರೀತಿಯಲ್ಲಿ, ಸರಿ ಉತ್ತರ ಕಂಡು ಹಿಡಿಯುವವರನ್ನು ಪಿಯಾಜೆ, 'ಔಪಚಾರಿಕ ಕಾರ್ಯಚರಣಾತ್ಮಕ ತಾರ್ಕಿಕ'ರೆಂದು (formal operational reasoners) ಕರೆಯುತ್ತಾರೆ. ಹೀಗೆ, ಕೊನೆಯ ಪಕ್ಷ ಜ್ಞಾನಗ್ರಹಿಕೆಯ ದೃಷ್ಟಿಯಲ್ಲಿ ಹದಿಹರೆಯವನ್ನು ಔಪಚಾರಿಕ ಕಾರ್ಯಚರಣೆಯ ಹಂತ ಎಂದು ನೋಡಲಾಗುತ್ತದೆ.

ಪ್ರಪಂಚದೆಲ್ಲೆಡೆ ಭಾರೀ ಸಂಖ್ಯೆಯಲ್ಲಿ ಹದಿಹರೆಯದವರು ಅಂದಿನಿಂದ ಈ ಚಟುವಟಿಕೆಯನ್ನು ಮಾಡಿದ್ದಾರೆ. ಬೀಕರಿನಲ್ಲಿನ ರಾಸಾಯನಿಕ ಕಲಕುವಿಕೆಯಿಂದ ನಮಗೆ ಎರಡು ಆಸಕ್ತಿಕರ ವಿಷಯಗಳನ್ನು ತಿಳಿಯಲು ಸಾಧ್ಯವಾಗಿದೆ. ಮೊದಲನೆಯದಾಗಿ, ಹದಿಹರೆಯದವರಲ್ಲಿ ಮತ್ತು ವಯಸ್ಕರಲ್ಲಿ ಇಪ್ಪತ್ತು ಪ್ರತಿಶತ ಜನರು ಮಾತ್ರ ನಿಜವಾಗಿ 'ಔಪಚಾರಿಕ ಕಾರ್ಯಾಚರಣೆಯ ತಾರ್ಕಿಕತೆ'ಯುಳ್ಳವರಾಗಿರುತ್ತಾರೆ. ಮನೋವಿಜ್ಞಾನಿಗಳು, ತಾರ್ಕಿಕ ವಿಶ್ಲೇಷಣೆಯ ಆವಶ್ಯಕತೆಯಿರುವ ಇತರ ಚಟುವಟಿಕೆಗಳನ್ನು ಸಿದ್ಧಪಡಿಸಿದ್ದಾರೆ. ಅವು, ಯಾವ ಬ್ರ್ಯಾಂಡನ್ನು ಕೊಂಡುಕೊಳ್ಳುವುದು ಉತ್ತಮ, ಮುಂತಾದ ರೀತಿಯವು. ಅಂತಹ ಎಲ್ಲ ಚಟುವಟಿಕೆಗಳಲ್ಲಿಯೂ ಸಹ ಬಹುಪಾಲು ಹದಿಹರೆಯದವರು ಮತ್ತು ವಯಸ್ಕರು ತಾರ್ಕಿಕವಾಗಿ ಆಲೋಚಿಸುವಲ್ಲಿ ಸೋಲುತ್ತಾರೆ.



ಎರಡನೆಯದಾಗಿ, ಸ್ಪಷ್ಟ ತರಬೇತಿಯ ಮೂಲಕ, ಹದಿಹರೆಯದವರಷ್ಟೇ ಅಲ್ಲದೆ, ಚಿಕ್ಕಮಕ್ಕಳೂ ಸಹ ಸುಸಂಬದ್ಧ ತಾರ್ಕಿಕರಾಗಬಹುದೆಂದು ತಿಳಿದು ಬಂದಿದೆ. ಇವೆಲ್ಲವೂ ಹಲವಾರು ಸಂಕೀರ್ಣ ಕ್ರಿಯೆಗಳಲ್ಲಿನ ಕಾರ್ಯನಿರ್ವಹಣೆಯನ್ನು ಸುಧಾರಿಸುವಲ್ಲಿ, ಉತ್ತಮಗೊಂಡ ಮೂಲಭೂತ ಸಾಮರ್ಥ್ಯಗಳ ಮತ್ತು ಸ್ಪಷ್ಟ ತರಬೇತಿಯ ಪ್ರಭಾವವನ್ನು ಸೂಚಿಸುತ್ತದೆ. ಹದಿಹರೆಯದವರು ಆ ಬೆಳವಣಿಗೆ ರೇಖೆಯ (Developmental Curve) ಉತ್ತುಂಗದಲ್ಲಿರುವುದರಿಂದ, ತಾರ್ಕಿಕತೆಯ ಹಲವಾರು ಕ್ಷೇತ್ರಗಳಲ್ಲಿ ನಾವು ಬದಲಾವಣೆಗಳನ್ನು ಸ್ವಾಭಾವಿಕವಾಗಿಯೇ ನಿರೀಕ್ಷಿಸಬಹುದಾಗಿದೆ.

ಅಧ್ಯಾಯ 4ರಲ್ಲಿ ನಿಮಗೆ ಪರಿಚಯವಾದ ವಿಕಾಸ ಮತ್ತು ವಿಭಿನ್ನ ಸಾಂಸ್ಕೃತಿಕ ವಿಚಾರಗಳ ಮನೋವಿಜ್ಞಾನಿ, ಮೈಕೇಲ್ ಕೋಲ್ ಅವರು, ಹದಿಹರೆಯದವರಿಗೆ ಊಹನಾತ್ಮಕ ಸಾಧ್ಯತೆಗಳ ಬಗ್ಗೆ, ಭವಿಷ್ಯದ ಬಗ್ಗೆ, ತಮ್ಮ ಹಾಗು ಬೇರೆಯವರ ಆಲೋಚನೆಗಳ ಬಗ್ಗೆ, ಸಾಮಾಜಿಕ ಸಂಪ್ರದಾಯಗಳನ್ನು ಮೀರಿ ಯೋಚಿಸುವ ಹೆಚ್ಚಿನ ಸಾಮರ್ಥ್ಯಗಳಿರುತ್ತವೆ ಎಂದು ವಿವರಿಸುತ್ತಾರೆ. ಹಾಗೆ ನೋಡಿದರೆ, ಈ ಕೊನೆಯ ಅಂಶ ಅವರಿಗೆ ವಯಸ್ಕರ ಜೀವನ, ವಯಸ್ಕರ ಸಮಾಜಗಳಲ್ಲಿರುವ ದ್ವಂದ್ವಗಳನ್ನು ನೋಡುವಂತೆ ಮಾಡಿ, ಅದು ಕೆಲವೊಮ್ಮೆ ಸಿನಿಕತನಕ್ಕೆ ತಿರುಗಿ, ಎಲ್ಲ ಸಂಪ್ರದಾಯಗಳನ್ನು ತಿರಸ್ಕರಿಸುವಂತೆ ಮಾಡಬಹುದು. ಬಹುಶಃ ಸ್ವಾಯತ್ತತೆಯ ಸಾಮಾನ್ಯ ಆವಶ್ಯಕತೆಗೆ ಈ ಬೆಳವಣಿಗೆ ದಾರಿ ಮಾಡಿಕೊಡುತ್ತದೆ. ಹಾಗಿದ್ದರೆ ಹದಿಹರೆಯದವರು ವಯಸ್ಕರಾದ ನಮಗೆ ಬರೀ ತಾರ್ಕಿಕ ಪ್ರಶ್ನಾರ್ಥಿಗಳಾಗಿರದೆ, ಪ್ರತಿಭಟನಾಕಾರರಾಗಿ ಅಥವಾ ಅಸಮಧಾನಗಳಾಗಿ ಬದಲಾವಣೆಗೊಂಡರೆ ನಮಗದು ಅಚ್ಚರಿಯ ಸಂಗತಿಯಾಗಕೂಡದು!

ನಮಗೆ ಯಾರಿಗೇ ಆಗಲಿ, ಬದಲಾವಣೆಗೆ ಹೊಂದಿಕೊಳ್ಳುವುದು ಕಷ್ಟವೇ. ಅಂತಹದ್ದರಲ್ಲಿ, ಬದುಕಿನಲ್ಲಿ ತಮ್ಮ ಒಳಗೂ, (ಕನಿಷ್ಠ ಅವರ ಗ್ರಹಿಕೆಯಲ್ಲಾದರೂ) ತಮ್ಮ ಹೊರಗೂ ಎಲ್ಲವೂ ತ್ವರಿತ ಗತಿಯಲ್ಲಿ ಬದಲಾಗುತ್ತಿರುವಾಗ, ಹದಿಹರೆಯದವರು ಎದುರಿಸಬಹುದಾದ ಸವಾಲುಗಳನ್ನು ನಾವು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಈ ಬದಲಾವಣೆಗಳು ನಡೆಯುವಾಗ, ಆ ಸ್ಥಿತ್ಯಂತರವು ಅವರಿಗೆ ಸುಗಮವಾಗುವಂತೆ ಸಹಾಯವಾಗಲು ಶಾಲೆಗಳು ಯಾವ ರೀತಿಯಲ್ಲಿ ಮಕ್ಕಳಿಗೆ ನೆರವಾಗಬಹುದೆಂದು ನಾವು ನೋಡಬೇಕಾಗಿದೆ. ದುರದೃಷ್ಟವೆಂಬಂತೆ, ಅಧ್ಯಯನಗಳ ಪ್ರಕಾರ ಶಾಲೆಗಳು ಹದಿಹರೆಯದವರ ಆವಶ್ಯಕತೆಗಳಿಗೆ ಹೊಂದುವುದನ್ನು ಒದಗಿಸುವುದಕ್ಕಿಂತ, ಹೊಂದದ್ದನ್ನು ಒದಗಿಸುವುದೇ ಹೆಚ್ಚು. ಈ ವ್ಯತ್ಯಯವನ್ನು ಈ ಅಧ್ಯಾಯದ ಮುಂದಿನ ಭಾಗದಲ್ಲಿ ವಿವರಿಸಲಾಗುವುದರ ಜೊತೆಗೆ ಈ ಸಂಶೋಧನೆಯಿಂದ ದೊರೆತ ಸಲಹೆಗಳನ್ನು ಶಾಲೆಗಳು ಮತ್ತು ಶಿಕ್ಷಕರಿಗಾಗಿ ನೀಡಲಾಗಿದೆ.

ಶಾಲೆ ಮತ್ತು ಹದಿಹರೆಯದವರು

ನಿಮ್ಮ ಶಾಲೆಯ ಗುರಿಗಳೇನು ಹಾಗು ಅವನ್ನು ಹೇಗೆ ಸಾಧಿಸಿಕೊಳ್ಳುತ್ತೀರಿ? ಯಶಸ್ಸಿನ ಅರ್ಥದ ಬಗ್ಗೆ ಶಾಲೆಯು ಯಾವ ಸಂದೇಶಗಳನ್ನು ನೀಡುತ್ತದೆ ಮತ್ತು ಅವನ್ನು ಶಿಕ್ಷಕರು ಹೇಗೆ ವಾಸ್ತವವಾಗಿ ಬದಲಾಯಿಸುತ್ತಾರೆ? ವಿದ್ಯಾರ್ಥಿಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಾಗು ಮುಖ್ಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಅವಕಾಶಗಳನ್ನು ನೀಡಲಾಗುತ್ತದೆಯೇ? ಶಿಕ್ಷಕರು ಅರ್ಥಗ್ರಹಿಕೆ ಮತ್ತು ಪ್ರಯತ್ನಗಳಿಗೆ ಒತ್ತು ನೀಡುತ್ತಾರೆಯೇ? ಅಥವಾ 'ಜಾಣ' ವಿದ್ಯಾರ್ಥಿಗಳನ್ನು ಬೇರೆಲ್ಲ ವಿದ್ಯಾರ್ಥಿಗಳನ್ನು ಕಾಣುವುದಕ್ಕಿಂತ ಉತ್ತಮವಾಗಿ, ವಿಶೇಷವಾಗಿ ಕಾಣುತ್ತಾರೆಯೇ? ಶಾಲೆಯು

ಏಕರೂಪಿ ಸಾಮರ್ಥ್ಯದ ಗುಂಪುಗಳ ಪರವಾಗಿ ಇದ್ದರೆ (ಉದಾಹರಣೆಗೆ, ವಿದ್ಯಾರ್ಥಿಗಳನ್ನು 'ಪತ್ತೆಹಚ್ಚುವ' ಅಥವಾ 'ವರ್ಗೀಕರಿಸುವ' ಮೂಲಕ), ಸಾಧನೆಗಳನ್ನು ಗುರುತಿಸಲು ಬಹುಮಾನಗಳನ್ನು ನೀಡಲು ಆರಂಭಿಸಿದರೆ, ವಿದ್ಯಾರ್ಥಿಗಳು ಗಳಿಸಿದ ಅತ್ಯುನ್ನತ ಶ್ರೇಣಿಗಳನ್ನು (ರ್‍ಯಾಂಕ್‌ಗಳನ್ನು) ಪ್ರಚಾರ ಮಾಡಿದರೆ, ಆಗ ಈ ಶಾಲೆಯ ಗುರಿಯು ಸ್ಪಷ್ಟವಾಗಿ ಸ್ಪರ್ಧಾತ್ಮಕತೆ ಮತ್ತು ಸಾಮಾಜಿಕ ಹೋಲಿಕೆಯತ್ತ ಇರುತ್ತದೆ ಎನ್ನಬಹುದು. ಇಂತಹ ಪರಿಸರದಲ್ಲಿ, ಉತ್ತಮಗೊಳಿಸುವಿಕೆ ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರಭುತ್ವ 'ಯಶಸ್ಸಿ'ಗೆ ಮುಖ್ಯವಲ್ಲ ಎಂಬ ಸಂದೇಶವನ್ನು ಹದಿಹರೆಯದ ವಿದ್ಯಾರ್ಥಿಗಳು ಗ್ರಹಿಸುತ್ತಾರೆ. ಅದು ಅವರ ಕಲಿಕಾ ಅಭಿಪ್ರೇರಣೆಯ ಮೇಲೆ ದುಷ್ಪರಿಣಾಮವನ್ನು ಬೀರಿ, ಅವರನ್ನು ಹತಾಶರನ್ನಾಗಿಸುತ್ತದೆ, ಅಥವಾ ಕೊನೆಯ ಪಕ್ಷ ಅವರಲ್ಲಿ ಕಲಿಕೆಯ ಬಗ್ಗೆ ಸ್ವಪ್ರಜ್ಞೆಯುಂಟಾಗಬಹುದು. ಅದೂ ಅವರಿಗೆ ವಿಶೇಷವಾಗಿ ಸ್ವಪ್ರಜ್ಞಾ ಭಾವ ಉಂಟಾಗುವ ಈ ವಯಸ್ಸಿನಲ್ಲೇ ಸಂಭವಿಸುತ್ತದೆ. ಸ್ವಪ್ರಜ್ಞೆಯು ಏಕಾಗ್ರತೆಯನ್ನು ಕೆಡಿಸಿ, ಶೈಕ್ಷಣಿಕ ಸವಾಲುಗಳನ್ನು ಸ್ವೀಕರಿಸುವಲ್ಲಿ ಭಯವುಂಟಾಗುವಂತೆ ಮಾಡುತ್ತದೆ.

ಶಾಲಾ ಪರಿಸರದಲ್ಲಿನ ಹಲವು ಅಂಶಗಳು ನಿಜಕ್ಕೂ ಹದಿಹರೆಯದವರ ವಿಶೇಷ ಆವಶ್ಯಕತೆಗಳ ವಿರುದ್ಧ ಕೆಲಸ ಮಾಡುತ್ತವೆ. ಮನೋವಿಜ್ಞಾನಿ, ರಾಬರ್ಟ್ ರೋಜ಼ರ್ ಮತ್ತು ಅವರ ಸಹೋದ್ಯೋಗಿಗಳು, ಅಮೆರಿಕಾ ಮತ್ತು ಭಾರತ ದೇಶಗಳೆರಡರಲ್ಲೂ ಶಾಲಾ ಪರಿಸರಗಳು ಮತ್ತು ಹದಿಹರೆಯದವರ ಆವಶ್ಯಕತೆಗಳಿಗಿರುವ ಸಂಬಂಧವನ್ನು ವಿಶ್ಲೇಷಿಸಿದ್ದಾರೆ. ಹದಿಹರೆಯದವರು ಭಾವನಾತ್ಮಕವಾಗಿ ಬೆಂಬಲ ನೀಡಬಲ್ಲ, ಪೋಷಕರಲ್ಲದ ಬೇರೆ ಹಿರಿಯರೊಂದಿಗೆ ಸಂಪರ್ಕದಲ್ಲಿರಲು ಬಯಸುತ್ತಾರೆ. ಏಕೆಂದರೆ ಜೀವನದ ಈ ಹಂತದಲ್ಲಿ ಅವರು ತಮ್ಮ ಪೋಷಕರಿಂದ ಅತಿಯಾದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಬಯಸುತ್ತಿರುತ್ತಾರೆ. ಈ ಸಮಯದಲ್ಲಿ ಪ್ರೀತಿ ಪ್ರೇಮವು ಅವರನ್ನು ಆವರಿಸುವುದರಿಂದ ತಮ್ಮ ಸಹವರ್ತಿಗಳಿಗೆ ಹೇಗೆ ಕಾಣಿಸುತ್ತಿದ್ದೇವೆ (ಕೇವಲ ದೈಹಿಕವಾಗಿಯಲ್ಲ) ಎಂಬ ಬಗ್ಗೆ ಅವರು ತೀರಾ ಅತಿಯಾಗಿ ಗಮನವಿಟ್ಟಿರುತ್ತಾರೆ. ಸಾಮಾಜಿಕವಾಗಿ ಒಂದು ಚಿಕ್ಕ ಹೋಲಿಕೆಯನ್ನು ಮಾಡಿದರೂ ಸಾರ್ವಜನಿಕವಾಗಿ ಅವಮಾನಕ್ಕೊಳಗಾದಂತೆ ಭಾವಿಸಬಹುದು. ಅವರು ಬೌದ್ಧಿಕವಾಗಿಯೂ, ದೈಹಿಕವಾಗಿಯೂ ಹೆಚ್ಚು ಸವಾಲೊಡ್ಡುವ ಕೆಲಸಗಳಿಗೆ ಸಿದ್ಧರಾಗಿರುತ್ತಾರೆ. ಆದರೆ ಅವರು ಪ್ರೌಢಶಾಲೆಗೆ ಬರುವ ಸಮಯಕ್ಕೆ ಪರಿಸರವು ಅವರ ಆವಶ್ಯಕತೆಗಳಿಗೆ ತೀರಾ ಸ್ಪಂದನಾರಹಿತವಾಗಿಬಿಡುತ್ತದೆ.

ಇನ್ನೂ ಕೆಲವು ಸಂದರ್ಭಗಳಲ್ಲಿ, ವಿದ್ಯಾರ್ಥಿಗಳು ಹದಿಹರೆಯಕ್ಕೆ ಕಾಲಿಡುವ ಸಮಯಕ್ಕೆ ಶಾಲೆ ಮತ್ತು ಅದರ ಬೇಡಿಕೆಗಳು ಅನಪೇಕ್ಷಣೀಯವಾಗಿ ಬದಲಾಗುತ್ತವೆ. ಉದಾಹರಣೆಗೆ, ಅವರಿಗೆ ಈಗ ಶಿಕ್ಷಕರಿಂದ ಸಿಗುವ ಭಾವನಾತ್ಮಕ ಬೆಂಬಲ, ಪ್ರಾಥಮಿಕ ಶಾಲೆಯಲ್ಲಿದ್ದಾಗ ಶಿಕ್ಷಕರಿಂದ ಸಿಗುತ್ತಿದ್ದ ಭಾವನಾತ್ಮಕ ಬೆಂಬಲಕ್ಕಿಂತ ಕಡಿಮೆಯಾಗಿರುತ್ತದೆ. ತುಲನಾತ್ಮಕ ಮೌಲ್ಯಮಾಪನ ಮತ್ತು ಬೋಧನೆಯಲ್ಲಿ ವಿಭಾಗೀಕರಣದತ್ತ ಹೆಚ್ಚಿನ ಒಲವು ಕಂಡುಬರುತ್ತವೆ. ಹೆಚ್ಚು ವಿದ್ಯಾರ್ಥಿಗಳಿರುವ ತರಗತಿಗಳಿಂದಾಗಿ ಶಿಕ್ಷಕ ವಿದ್ಯಾರ್ಥಿಗಳ ನಿಕಟ ಸಂಬಂಧಗಳು ಅಸಾಧ್ಯವಲ್ಲದಿದ್ದರೂ ಕಷ್ಟವಾಗುತ್ತವೆ. ಆದರೂ, ಬೆಂಬಲ ನೀಡುವ ಪೋಷಕರಲ್ಲದ ಹಿರಿಯರ ಸಂಬಂಧಗಳು ಹಿಂದೆಂದಿಗಿಂತಲೂ ಈಗ ಬಹಳ ಮುಖ್ಯವಾಗಿ ಬಿಡುತ್ತವೆ. ಇನ್ನೂ ಕೆಲವು ಸಂದರ್ಭಗಳಲ್ಲಿ, ಹದಿಹರೆಯದವರು ಅದೇ ಪರಿಸರವನ್ನು ತಮ್ಮ ಹೊಸ ಜ್ಞಾನಗ್ರಹಿಕೆಯ, ಭಾವನಾತ್ಮಕ ಮತ್ತು ಪ್ರೇರಣಾತ್ಮಕ ಬೆಳಕಿನಲ್ಲಿ ಭಿನ್ನವಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಹಿರಿಯರನ್ನು ಹೆಚ್ಚು ನಿರ್ಬಂಧ ಹೇರುವವರು ಅಥವಾ ವಿದ್ಯಾರ್ಥಿಗಳಿಗೆ ನಿರ್ಧಾರ ತೆಗೆದುಕೊಳ್ಳಲು ಮತ್ತು ಸ್ವಾಯತ್ತತೆಗೆ ಕಡಿಮೆ ಅವಕಾಶ ನೀಡುವವರು

ಎಂಬಂತೆ ನೋಡಲಾಗುತ್ತದೆ. ಇಕ್ಲೆಸ್ ಮತ್ತು ಅವರ ಸಹೋದ್ಯೋಗಿಗಳು ತಡವಾಗಿ ಮತ್ತು ಬೇಗನೆ ಪ್ರೌಢರಾಗುವ ಒಂದೇ ತರಗತಿಯ ಬಾಲಕಿಯರ ಮೇಲೆ ನಡೆಸಲಾದ ಅಧ್ಯಯನದಲ್ಲಿ ಇದಕ್ಕೆ ಸ್ಪಷ್ಟ ಪುರಾವೆ ಇದೆ. ದೈಹಿಕವಾಗಿ ಕಡಿಮೆ ಪ್ರೌಢರಾಗಿದ್ದ ಬಾಲಕಿಯರಿಗೆ ಹೋಲಿಸಿದರೆ, ದೈಹಿಕವಾಗಿ ಹೆಚ್ಚು ಪ್ರೌಢರಾಗಿದ್ದ ಬಾಲಕಿಯರಿಗೆ ತರಗತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವ ವಿಷಯಗಳಲ್ಲಿ ತಮ್ಮನ್ನು ಪರಿಗಣಿಸಬೇಕೆಂಬ ಮಹದಾಸೆಯಿತ್ತು. ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬಯಕೆಯ ಬಗ್ಗೆ ಅವರಿಗೆ ನೀಡಲಾದ ಅವಕಾಶಗಳಲ್ಲಿ 'ಹತೋಟಿಯಲ್ಲಿಡಲೇ ಬೇಕು' ಆದರೆ 'ಸಾಧ್ಯವಾಗುವುದಿಲ್ಲ'ಗಳ ನಡುವೆ ಮಹಾ ಜಿಜ್ಞಾಸೆ ಕಂಡು ಬಂದಿತು. ಉದಾಹರಣೆಗೆ, 'ಗಣಿತ ತರಗತಿಯಲ್ಲಿ ಮಾಡಬೇಕಾದ ಲೆಕ್ಕ ಯಾವುದು ಎಂದು ನಿರ್ಧರಿಸಲು ಸಹಾಯ ಪಡೆಯುವ ಅವಕಾಶ ನಿಮಗೆ ಸಿಗುತ್ತದೆಯೇ?' ಎನ್ನುವ ಪ್ರಶ್ನೆಗೆ, 'ಇಲ್ಲ' ಎಂದು ಉತ್ತರಿಸುತ್ತಾರೆ. 'ನಿಮಗೆ ಈ ಬಗ್ಗೆ ಹೇಳಲು ಏನಾದರೂ ಇದೆಯೇ' ಎಂಬ ಪ್ರಶ್ನೆಗೆ, 'ಹೌದು' ಎಂದು ಉತ್ತರಿಸಿದ್ದಾರೆ. ಎಕ್ಲೆಸ್ ಹೇಳುವಂತೆ ಈ ವ್ಯತ್ಯಾಸಗಳು ಭಾಗಶಃ ಪ್ರೌಢಾವಸ್ಥೆಯಲ್ಲಿ ಹದಿಹರೆಯದವರ ಪರಿಸರದ ಗ್ರಹಿಕೆಯ ಬದಲಾವಣೆಗಳಿಂದಾಗಿದ್ದರೆ, ಭಾಗಶಃ ದೈಹಿಕ ಪಕ್ವತೆಗೆ, ವಯಸ್ಕರು ಹೆಚ್ಚು ನಿಯಂತ್ರಿಸುವ ವರ್ತನೆಯೊಂದಿಗೆ ಸ್ಪಂದಿಸುವುದರಿಂದ ಆಗಿರಬಹುದು.

ಹದಿಹರೆಯದವರ ಕ್ರಿಯಾಶೀಲತೆ, ದೈಹಿಕ ಬಲ ಮತ್ತು ಸಾಮರ್ಥ್ಯಗಳ ಮಟ್ಟ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಬಹುತೇಕರನ್ನು ಸಾಕಷ್ಟು ಪ್ರಮಾಣದ ಓದುವ ಬರೆಯುವ ಕೆಲಸಗಳಿಗೆ ದೂಡಲಾಗುತ್ತದೆ. ಇದರಿಂದ, ದೈಹಿಕ ಚಟುವಟಿಕೆಗಳಿಗೆ ದೊರೆಯುವ ಅವಕಾಶಗಳು ಕಡಿಮೆಯಾಗುತ್ತವೆ. ಹಾಗೆಯೇ, ಹದಿನಾಲ್ಕರಿಂದ ಹದಿನೇಳು ವರ್ಷದವರಲ್ಲಿ ತಾರ್ಕಿಕ ಆಲೋಚನೆಗಳು, ಸಮರ್ಥ ಮಾಹಿತಿ ಸಂಸ್ಕರಣಾತ್ಮಕತೆಯು (ಉತ್ತಮ ಕಾರ್ಯನಿರತ ಜ್ಞಾಪಕಶಕ್ತಿಯಿಂದಾಗಿ) ಹೆಚ್ಚಾಗುತ್ತಿರುತ್ತವೆ. ಆದರೆ, ಈ ವಯಸ್ಸಿನ ಸುಮಾರಿಗೆ ಅವರ ಸಾಕಷ್ಟು ಸಮಯವು ಶಾಲಾ ಪರೀಕ್ಷೆಗಳಿಗೆ ತಯಾರಾಗುವುದರಲ್ಲೇ ಕಳೆದು ಹೋಗುತ್ತದೆ. ಈ ಮೌಲ್ಯಮಾಪನಗಳು ಸರಿಯಾದ ರೀತಿಯಲ್ಲಿ ಸವಾಲೊಡ್ಡುವಂತಹವಾಗಿಲ್ಲದಿದ್ದರೆ ಹದಿಹರೆಯದವರಲ್ಲಿ ಬೆಳೆಯುತ್ತಿರುವ ಅಮೂರ್ತೀಕರಣ ಮತ್ತು ಅರ್ಥಗ್ರಹಿಕೆಯ ಸಾಮರ್ಥ್ಯಗಳು ದೊಡ್ಡಮಟ್ಟದಲ್ಲಿ ವ್ಯರ್ಥವಾಗಿಬಿಡುತ್ತವೆ.

ಅಂತಿಮವಾಗಿ, ಈ ಎಲ್ಲ ಹೊಂದಾಣಿಕೆಯ ಅಭಾವದಿಂದಾಗಿ, ಬಹಳಷ್ಟು ಸಂದರ್ಭಗಳಲ್ಲಿ ವಿದ್ಯಾರ್ಥಿಯ ಮೇಲೆ ಋಣಾತ್ಮಕ ಪರಿಣಾಮಗಳು ಉಂಟಾಗುತ್ತವೆ. ಶೈಕ್ಷಣಿಕ ಕ್ಷೇತ್ರದಲ್ಲಿನ ಸಾಮಾನ್ಯ ದುಷ್ಪರಿಣಾಮಗಳೆಂದರೆ, ಅಭಿಪ್ರೇರಣೆಯಲ್ಲಿ ಕುಸಿತ, ಶಾಲೆಯ ಬಗ್ಗೆ ಕುಂಠಿತವಾದ ಆಸಕ್ತಿ, ಕಡಿಮೆ ಮಟ್ಟದ ಸಾಧನೆ, ಜೊತೆಗೆ ತಾವು ಸಮರ್ಥರಲ್ಲ ಎಂಬ ಭಾವನೆ. ಆದ್ದರಿಂದ ನಾವು ಈ ಭಾಗದ (ಶಾಲೆ ಮತ್ತು ಹದಿಹರೆಯದವರು) ಆರಂಭದಲ್ಲಿ ಕೇಳಿದ ಪ್ರಶ್ನೆಗೆ ಹಿಂದಿರುಗುವುದಾದರೆ, ಹದಿಹರೆಯದವರ ಈ ಸ್ಥಿತ್ಯಂತರವನ್ನು ಸುಗಮಗೊಳಿಸಲು ಶಾಲೆ ಏನು ಮಾಡಬಹುದು? ನಿಮ್ಮ ಪರಿಸರದಲ್ಲಿ ಯಾವುದು ಚೆನ್ನಾಗಿ ಕೆಲಸ ಮಾಡಬಹುದೆಂದು ನೀವು ಮಾತ್ರ ನಿರ್ಧರಿಸಬಹುದು. ಇದೇ ಕಾರಣಕ್ಕೆ, ನಾನು 'ಏನು ಮಾಡಬಹುದು, ಏನು ಮಾಡಬಾರದು'ಗಳ ಪಟ್ಟಿ ತಯಾರಿಸಲು ಯಾವಾಗಲೂ ಹಿಂಜರಿಯುತ್ತೇನೆ. ಆದರೂ, ನನ್ನ ಸಂಶೋಧನೆ ಮತ್ತು ಸ್ವಯಂಗ್ರಹಿಕೆಯ ಆಧಾರದ ಮೇಲೆ ಕೆಲವನ್ನು ಪಟ್ಟಿ ಮಾಡಲು ಅಡ್ಡಿಯೇನಿಲ್ಲ.

ನಿಮ್ಮ ವಿದ್ಯಾರ್ಥಿಗಳಿಗೆ ತೀರಾ ನೈಜವಾದ ಜವಾಬ್ದಾರಿಗಳನ್ನು ನೀಡಿ. ತಮ್ಮ ಕಲಿಕೆಯ ಬಗ್ಗೆ ಮಾತ್ರವಲ್ಲದೇ ಅವರ ಸುತ್ತಲಿನ ವಿಷಯಗಳಿಗೂ ಅವರನ್ನು ಜವಾಬ್ದಾರರನ್ನಾಗಿಸಿ. ಹಾಗೆಂದ

ಮಾತ್ರಕ್ಕೆ, ಇದು ನಿಮ್ಮ ಹೊರೆಯನ್ನೇನೂ ಕಡಿಮೆ ಮಾಡುವುದಿಲ್ಲ! ಇದು ನಿಮ್ಮ ಸಮಯ ಮತ್ತು ಶಕ್ತಿಯ ಅಗಾಧ ತೊಡಗುವಿಕೆಯನ್ನು ನಿರೀಕ್ಷಿಸುವ ಸಾಧ್ಯತೆಯೇ ಹೆಚ್ಚು (ಕನಿಷ್ಠ ಪಕ್ಷ, ಆರಂಭದ ಅವಧಿಯಲ್ಲಾದರೂ). ವಿದ್ಯಾರ್ಥಿಗಳೇ ನಿರ್ಧಾರ ತೆಗೆದುಕೊಳ್ಳಲು ಮತ್ತು ಕಾರ್ಯನಿರ್ವಹಿಸಲು ಸಾಧ್ಯವಾಗುವಂತಹ ಚಟುವಟಿಕೆಗಳು ಮತ್ತು ಸಂದರ್ಭಗಳನ್ನು ಅವರಿಗಾಗಿ ರೂಪಿಸಬೇಕು. ನೀವು ನಿಮ್ಮ ವಿದ್ಯಾರ್ಥಿಗಳ ಕಲಿಕೆಯಲ್ಲಿ ಕ್ರಮೇಣ ನಿಯಂತ್ರಣ ಸಾಧಿಸುವುದನ್ನು ಕಡಿಮೆಗೊಳಿಸಿ, ಅನುಕೂಲಕಾರ (facilitator)ರನ್ನಾಗಿಸುವುದು ಇದರ ಉದ್ದೇಶ.

ಹದಿಹರೆಯದವರ ನಡುವಿನ ಗೆಳೆತನಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿ. ನಾವು ಬಹಳಷ್ಟು ಹಿರಿಯರು ಅಂತಹ ಗೆಳೆತನವನ್ನು ಸ್ವಲ್ಪ ಅನುಮಾನದಿಂದಲೇ ನೋಡುತ್ತೇವೆ, ಅಲ್ಲದೇ ಕೆಲವು ಶಾಲೆಗಳಲ್ಲಿ ಪ್ರತಿವರ್ಷವೂ ತರಗತಿಯಲ್ಲಿನ ಕುಳಿತುಕೊಳ್ಳುವ ಏರ್ಪಾಟುಗಳನ್ನು ಬದಲಾಯಿಸುವ ಮೂಲಕ ಈ ಗೆಳೆತನಗಳನ್ನು ಉದ್ದೇಶಪೂರ್ವಕವಾಗಿ ಮುರಿಯುವ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಶಿಕ್ಷಕರಾಗಿ ನಮಗೆ ಗೆಳೆಯರನ್ನು 'ಬೇರೆ ಮಾಡುವ' ಪ್ರವೃತ್ತಿಯಿರುತ್ತದೆ. ಇದಕ್ಕೆ ನಮಗೆ ಬಲವಾದ ಕಾರಣಗಳೂ ಇರಬಹುದು. ಆದರೆ ಸಹಪಾಠಿ ಸಂಬಂಧಗಳ ಪ್ರಾಮುಖ್ಯತೆಯನ್ನು ನಾವು ನಿರಾಕರಿಸಿದರೆ, ಪ್ರತ್ಯೇಕತನದ ಅಪಾಯವನ್ನು ನಾವು ಎದುರಿಸಬೇಕಾಗುತ್ತದೆ. ಜೊತೆಗೆ ವಿದ್ಯಾರ್ಥಿಯ ಭಾವನಾತ್ಮಕ ಜೀವನಕ್ಕೆ ಸಹವರ್ತಿ ಗುಂಪುಗಳ ಪ್ರಯೋಜನಗಳನ್ನು ನಿರಾಕರಿಸುತ್ತಿರುತ್ತೇವೆ. ಹಾಗೆ ನೋಡಿದರೆ, ಈ ಗೆಳೆತನದ ಪ್ರಯೋಜನಗಳು ಇದ್ದೇ ಇವೆ. 'ಸಹಪಾಠಿ ಪ್ರಭಾವ'ವು ಕೇವಲ ಅನುಚಿತ ವರ್ತನೆಯನ್ನಷ್ಟೇ ಸೂಚಿಸುತ್ತದೆಂಬ ಋಣಾತ್ಮಕ ಅರ್ಥವನ್ನು ಹೊಂದಿದೆಯಾದರೂ, ತಮ್ಮ ಸಹಪಾಠಿಗಳ ಪ್ರಭಾವದಿಂದ ಬರುವ ಧನಾತ್ಮಕ ವರ್ತನೆಗಳೂ ಇವೆ. ಅಧ್ಯಯನಗಳ ಪ್ರಕಾರ, ಸಹಪಾಠಿ ಒತ್ತಡವನ್ನು ಪ್ರತಿರೋಧಿಸುವ ಸಾಮರ್ಥ್ಯದ ಬಗ್ಗೆ ನಾವು ತೀರಾ ಚಿಂತಿಸಲೇಬಾರದು. ಈ ವಿಚಾರಗಳನ್ನು **ಬಾಕ್ಸ್ 1**ರಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಹುಡುಗ ಹುಡುಗಿಯರ ನಡುವಿನ ಗೆಳೆತನಗಳ ಮೇಲೆ ನಿರ್ಬಂಧ ಹೇರಬೇಡಿ: ಬಹುಶಃ ಇದು ಪಾಲಿಸಲು ತುಂಬಾ ಕಠಿಣವೆನಿಸಬಹುದು. ಏಕೆಂದರೆ, ಹದಿಹರೆಯದವರಿಗೆ ತಮ್ಮ ಲೈಂಗಿಕತೆಯನ್ನು 'ಪೂರ್ಣವಾಗಿ' ಶೋಧಿಸಲು ಬಿಡುವುದರಲ್ಲಿ ನಿಜವಾದ ಅಪಾಯಗಳಿವೆ. ಈ ನೈಜ ಅಪಾಯಗಳ ಕಾರಣದಿಂದಾಗಿ ನಾವು ಹುಡುಗಿಯರು ಮತ್ತು ಹುಡುಗರ ನಡುವಿನ ಯಾವುದೇ ತರಹದ ಸಂಪರ್ಕದ ಮೇಲೆ ಎಚ್ಚರಿಕೆಯ ಕಣ್ಣಿಡುವುದು, ನಿಷೇಧಿಸುವುದು ಮತ್ತು ಅವಕಾಶ ಕೊಡದಿರಲು ಒಲವು ತೋರುತ್ತೇವೆ. ಈ ತಪ್ಪಿನ ಹಿಂದೆ ಕನಿಷ್ಠ ಎರಡು ಕಾರಣಗಳಿವೆ. ಮೊದಲನೆಯದಾಗಿ, ಹದಿಹರೆಯದವರ ಬಹುತೇಕ ಆಲೋಚನೆಗಳು ಮತ್ತು ಭಾವನೆಗಳು, ನೈಸರ್ಗಿಕ ಹಾಗು ಜೈವಿಕ ಪ್ರಕ್ರಿಯೆಯಾದ (ಅಂತಹದೊಂದು ಪ್ರಕ್ರಿಯೆ ಇದ್ದರೆ) ದೈಹಿಕ ಆಕರ್ಷಣೆ ಮತ್ತು ಪ್ರೀತಿ ಪ್ರೇಮದತ್ತಲೇ ಇರುತ್ತವೆ ಎಂಬುದನ್ನು ನಾವು ಕಡೆಗಣಿಸುತ್ತೇವೆ. ಯಾವುದೇ ರೀತಿಯಲ್ಲಿ ಈ ಸೆಳೆತಗಳು ವ್ಯಕ್ತವಾಗುವುದು ಬೇಡವೆಂದು ನಾವು ಬಯಸುವುದಾದರೆ, ಖಂಡಿತವಾಗಿ ಅವುಗಳನ್ನು ದಮನ ಮಾಡಲು ಕೂಡ ಬಯಸಬಾರದು. ಈ ವಿಷಯವನ್ನು ರಚನಾತ್ಮಕವಾಗಿ ಹೇಗೆ ನಿರ್ವಹಿಸಬೇಕೆಂದು ನಾವು ಯೋಚಿಸಲೇಬೇಕು. ನಿರ್ಬಂಧ ಹೇರುವುದು ತೀರಾ ಸುಲಭ, ಆದರೆ ದೀರ್ಘಾವಧಿಯಲ್ಲಿ ಇದು ಕೆಲಸ ಮಾಡುವುದಿಲ್ಲ. ಎರಡನೆಯದಾಗಿ, ಹದಿಹರೆಯದವರು ಹೇಗೂ ತಮ್ಮ ಲೈಂಗಿಕತೆಯನ್ನು ಶೋಧಿಸಿಕೊಳ್ಳುತ್ತಾರೆ, ಇದನ್ನು ಒಪ್ಪದ ಹಿರಿಯರಿಗೆ ಗೊತ್ತಾಗದಿರುವಂತೆ ಎಚ್ಚರವಹಿಸುತ್ತಾರೆ. ಹೀಗೆ ಲೈಂಗಿಕತೆಯ ಬಗ್ಗೆ ನಮ್ಮ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಅವಕಾಶವನ್ನು

ನಾವು ಕಳೆದುಕೊಂಡಿರುತ್ತೇವೆ. ಹೀಗಾಗಿ, ಅವರು ನಮ್ಮಿಂದ ಏನನ್ನೂ ಕಲಿಯುವುದಿಲ್ಲ. ಈ ಕುರಿತು ಮುಕ್ತವಾಗಿ ಮಾತನಾಡುವುದೇನು ಸುಲಭವಲ್ಲ. ಹದಿಹರೆಯದವರು ಇವುಗಳನ್ನು ಖಾಸಗಿ ವಿಷಯ ಎಂದು ಭಾವಿಸುವುದರಿಂದ, ನಮ್ಮೊಡನೆ ತಮ್ಮ ಆಲೋಚನೆಗಳನ್ನು ಹಾಗು ಭಾವನೆಗಳನ್ನು ವ್ಯಕ್ತಪಡಿಸಲು ಹಿಂಜರಿಯುತ್ತಾರೆ. ಇದು ಅರ್ಥವಾಗುವಂತಹ ವಿಷಯ. ಇತ್ತೀಚಿನ ಅಧ್ಯಯನಗಳು ಈ ಬಗ್ಗೆ ಮಾತನಾಡುವುದು ಅಷ್ಟೇನು ಪರಿಣಾಮಕಾರಿಯೇನಲ್ಲ ಎಂದು ಸೂಚಿಸುತ್ತದೆ. ಈ ಅಧ್ಯಾಯದ ಕೊನೆಯ ಭಾಗದಲ್ಲಿ ಇದನ್ನು ಬಹಳ ವಿವರವಾಗಿ ಚರ್ಚಿಸಲಾಗಿದೆ.

ತೌಲನಿಕ ಮೌಲ್ಯಮಾಪನ ಬಳಸಬೇಡಿ. ಭಾರತದಲ್ಲಿ, ನಮ್ಮ ಇಡೀ ಶೈಕ್ಷಣಿಕ ವ್ಯವಸ್ಥೆಯು ತೀರಾ ಕಿರಿಯ ವಯಸ್ಸಿನಿಂದಲೂ ಪ್ರಗತಿ ಮತ್ತು ಹೋಲಿಕೆಯ ಮೇಲೆ ಅವಲಂಬಿತವಾಗಿದೆ. ಹಿರಿಯರು ಪುಟಾಣಿಗಳನ್ನು ಕುರಿತು, 'ಈಗ ಯಾರು ಬೇಗ ತಿಂತಾರೆ ನೋಡೋಣ', 'ಬೇಗ ಮುಗ್ಸು, ಇಲ್ಲ ಅಂದ್ರೆ ಅವಳು/ನು ಮೊದಲು ಮುಗ್ಸಿಬಿಡ್ತಾಳೆ/ನೆ' ಹಾಗು 'ಅವಳೆಷ್ಟು ಚೆನ್ನಾಗಿ ಆಡ್ತಾಳೆ ನೋಡು, ನೀನ್ಯಾಕೆ ಅವ್ಳ್ ಥರಾ ಆಟ ಆಡೋಕ್ಕೆ ಆಗೋಲ್ಲ?'ಎನ್ನುವುದನ್ನು ನಾವು ನೋಡಿರುತ್ತೇವೆ. ಆದ್ದರಿಂದ, ಮಕ್ಕಳು ಹದಿಹರೆಯಕ್ಕೆ ಕಾಲಿಟ್ಟಾಗ ಅವರ ಜೀವನದ ಪ್ರತಿಯೊಂದು ವಿಚಾರದಲ್ಲೂ ತೌಲನಿಕ ಮೌಲ್ಯಮಾಪನಕ್ಕೆ ನೀಡಲಾದ ನಿರಂತರ ಪ್ರಾಮುಖ್ಯತೆಯಿಂದಾಗಿ, ಅವರು ವಿಚಲಿತರಾಗುವ ಬದಲು ಇಂತಹದಕ್ಕೆ ಒಗ್ಗಿಕೊಂಡಿರುತ್ತಾರೆ ಎಂದು ನೀವು ಭಾವಿಸುತ್ತೀರಿ! ಆದರೆ ಇದು ವಿದ್ಯಾರ್ಥಿಗಳಲ್ಲಿಯೇ ತಮ್ಮನ್ನು ಬೇರೆಯವರ ಜೊತೆ ಹೋಲಿಸಿಕೊಂಡು ಮೌಲ್ಯಮಾಪನ ಮಾಡಿಕೊಳ್ಳುವ ಒಂದು ಬಲವಾದ ಹವ್ಯಾಸವನ್ನೂ ಹುಟ್ಟುಹಾಕಬಹುದು. ಬಹಳಷ್ಟು ಸಂಶೋಧನೆಗಳು, ಇದು ಅವರ ಬೆಳವಣಿಗೆ ಮತ್ತು ಕಲಿಕೆಗೆ ಅಪಾಯಕಾರಿ ಎಂದು ತೋರಿಸಿಕೊಟ್ಟಿವೆ (ಅಭಿಪ್ರೇರಣೆಯ ಬಗೆಗಿನ **ಅಧ್ಯಾಯ 8**ನ್ನು ನೋಡಿರಿ). ತುಲನಾತ್ಮಕವಾಗಿ ಯಶಸ್ವಿಯಾಗಿರುವವರನ್ನೂ ಸೇರಿಸಿಕೊಂಡು, ಎಂದೂ ವಿದ್ಯಾರ್ಥಿಗಳು ಈ ರೀತಿಯ ಮೌಲ್ಯಮಾಪನದಿಂದ ನೆಮ್ಮದಿಯಾಗಿರುತ್ತಾರೆಂದು ನನಗನ್ನಿಸುವುದಿಲ್ಲ. ನನ್ನ ಶಾಲಾ ದಿನಗಳಲ್ಲಿ ನನಗೆ ಗೊತ್ತಿದ್ದ ತೀರಾ ಆತಂಕಗೊಂಡ ಕಲಿಕಾರ್ಥಿಯೆಂದರೆ 'ತರಗತಿಗೇ ಪ್ರಥಮ'ವಾಗಿರುತ್ತಿದ್ದ ಹುಡುಗಿ. ಹದಿಹರೆಯದಲ್ಲಿ ವಿದ್ಯಾರ್ಥಿಗಳು ತಮ್ಮ ಬಗ್ಗೆ ಆಲೋಚಿಸುತ್ತಿರುವಾಗ ಹಾಗು ತಮ್ಮನ್ನು ವ್ಯಾಖ್ಯಾನಿಸಿಕೊಳ್ಳುತ್ತಿರುವಾಗ, ಋಣಾತ್ಮಕ ಹಿಮ್ಮಾಹಿತಿಯು ಅವರ ಋಣಾತ್ಮಕ ಸ್ವಚಿತ್ರಣ ಮತ್ತು ಅಲ್ಪಮಟ್ಟದ ಆತ್ಮಗೌರವಕ್ಕೆ ಕಾರಣವಾಗುತ್ತದೆ. ಆದ್ದರಿಂದ, ನೀವು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ಕಲಿಕಾ ಪ್ರಕ್ರಿಯೆಯನ್ನು ಗೌರವಿಸುವುದರ ಜೊತೆಗೆ ಅದಕ್ಕೆ ಮೌಲ್ಯ ನೀಡುತ್ತೀರೆಂದು ವಿದ್ಯಾರ್ಥಿಗಳಿಗೆ ತಿಳಿದಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಿರಿ. ಅವರು ಇನ್ನೂ ಉತ್ತಮವಾಗಿ ಕಲಿಯುವಂತೆ ಮಾಡಲು, ಹೋಲಿಕೆಯನ್ನು ಪ್ರಚೋದನೆಯಾಗಿ ಬಳಸುವುದನ್ನು ಬಿಟ್ಟುಬಿಡಿ.[25]

25 ಏನನ್ನಾದರೂ ಮಾಡಲು ಹೋಲಿಕೆ ಆಧಾರಿತ ಅಭಿಪ್ರೇರಣೆಯ ಪ್ರೋತ್ಸಾಹದ ಆವಶ್ಯಕತೆ ಇರುವಂತೆ ಕಾಣುವ ಕೆಲವು ವಿದ್ಯಾರ್ಥಿಗಳು ಬಹುತೇಕ ಇದ್ದೇ ಇರಬಹುದು! ಹಾಗಿದ್ದೂ, ಹದಿಹರೆಯದವರು ಅಭಿಪ್ರೇರಣೆ ಮತ್ತು ಹೋಲಿಕೆಗಳಂತಹ ಅಮೂರ್ತ ವಿಚಾರಗಳನ್ನು ಅರ್ಥ ಮಾಡಿಕೊಂಡು ಚರ್ಚಿಸಲು ಸಾಕಷ್ಟು ಸಮರ್ಥರೇ ಆಗಿರುತ್ತಾರೆ. ಈ ವಿಷಯಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಲು ನೀವು ಅವರನ್ನು ಆಹ್ವಾನಿಸಬಹುದು. ಆದರೆ ಸ್ವತಿಳಿವಳಿಕೆಯ ಫಲಿತಾಂಶಗಳನ್ನು ವೈಯಕ್ತಿಕವಾಗಿ ವಿದ್ಯಾರ್ಥಿಯೇ ಅರ್ಥಮಾಡಿಕೊಳ್ಳಲು ಬಿಡುವ ಮನಸ್ಸು ಮಾಡಿ.

ಬಾಕ್ಸ್ 1
ಸಹವರ್ತಿ ವಿದ್ಯಮಾನ

ಹದಿಹರೆಯದವರೊಂದಿಗೆ ಒಂದಿಷ್ಟಾದರೂ ಸಂಪರ್ಕ ಹೊಂದಿರುವ ಯಾರಿಗೇ ಆಗಲಿ, ಸಹವರ್ತಿ ಗುಂಪುಗಳು ವಿಭಿನ್ನ ರೀತಿಯ ಮೌಲ್ಯಗಳನ್ನು ಹೊಂದಿರುವುದು ತಿಳಿದಿರುತ್ತದೆ. ಉದಾಹರಣೆಗೆ, ಕೆಲವು ಸಹವರ್ತಿ ಗುಂಪುಗಳು ಗಾಢ ಹಾಗು ವಾತ್ಸಲ್ಯಮಯ ಸ್ನೇಹಕ್ಕೆ ಮಹತ್ವ ನೀಡಿದರೆ ಮತ್ತೆ ಕೆಲವು ಗುಂಪುಗಳು ಕ್ರೀಡಾ ಜಾಣ್ಮೆಗೆ, ಇನ್ನೂ ಕೆಲವು ಗುಂಪುಗಳು ಶೈಕ್ಷಣಿಕ ಉತ್ಕೃಷ್ಟತೆಗೆ ಮಹತ್ವ ನೀಡುತ್ತವೆ.



ಕೆಲವೊಂದು ಸಹವರ್ತಿ ಗುಂಪುಗಳು ಆದ್ಯತೆ ನೀಡುವ, ಅಂಗಡಿಗಳಲ್ಲಿ ವಸ್ತುಗಳನ್ನು ಎಗರಿಸುವುದು, ಆಸ್ತಿಪಾಸ್ತಿ ಹಾನಿಗೊಳಿಸುವಿಕೆ ಹಾಗು ಆಕ್ರಮಣಕಾರಿ ಪ್ರವೃತ್ತಿ ಮೊದಲಾದ ಸಮಾಜವಿರೋಧಿ ವರ್ತನಾ ಮೌಲ್ಯಗಳ (ವಿಶೇಷವಾಗಿ ಬಾಲಕರಲ್ಲಿ) ಬಗ್ಗೆ ಮನೋವೈಜ್ಞಾನಿಕ ಸಂಶೋಧನೆ ಮತ್ತು ಜನಪ್ರಿಯ ಮಾಧ್ಯಮಗಳೆರಡರಲ್ಲಿಯೂ, ಅತಿಯಾದ ಗಮನವನ್ನು ಸೆಳೆಯಲಾಗಿದೆ. ಹದಿಹರೆಯಕ್ಕೆ ಸಂಬಂಧಿಸಿದ ಮನೋವಿಜ್ಞಾನಿ, ಲ್ಯಾರಿ ಸ್ಟೆಯಿನ್‌ಬರ್ಗ್ ಅವರು ಸಹವರ್ತಿ ಗುಂಪುಗಳ ತಟಸ್ಥ ಮೌಲ್ಯಗಳಾದ ವಸ್ತ್ರಧಾರಣಾ ಶೈಲಿ, ಸಂಗೀತದ ಅಭಿರುಚಿ ಹಾಗು ಸಮಾಜಪರ ಕಾರ್ಯಚಟುವಟಿಕೆಯಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುವುದನ್ನು ನೋಡುವ ಮೂಲಕ, ಈ ಅಸಮತೋಲನವನ್ನು ಸರಿದೂಗಿಸಬಹುದು ಎಂದು ನಂಬುತ್ತಾರೆ. ಮದ್ಯ, ಮಾದಕದ್ರವ್ಯ ಮತ್ತು ಲೈಂಗಿಕ ಚಟುವಟಿಕೆಯಿಂದ ದೂರವಿರುವ ನಿರ್ಧಾರದಂತೆಯೇ, ಕಠಿಣ ಪರಿಶ್ರಮದಿಂದ ಕಲಿಕೆಯಲ್ಲಿ ಉತ್ತಮ ಪ್ರಗತಿ ಸಾಧಿಸುವ ನಿರ್ಧಾರವೂ ಸಾಮಾನ್ಯವಾಗಿ ಸಹವರ್ತಿ ಗುಂಪಿನ ಕರ್ತವ್ಯವಾಗಿರುತ್ತದೆ.

ಸಹವರ್ತಿಗಳು ಬೀರುವ ಪ್ರಭಾವಕ್ಕೆ ಹದಿಹರೆಯದವರಲ್ಲಿ ಪ್ರತಿರೋಧವೇ ಇಲ್ಲ ಎನ್ನುವುದು ವ್ಯಾಪಕವಾದ ಒಂದು ನಂಬಿಕೆಯಾಗಿದೆ. ಹಾಗಿದ್ದೂ, ಸ್ಟೆಯಿನ್‌ಬರ್ಗ್ ಮತ್ತು ಅವರ ಸಹೋದ್ಯೋಗಿಗಳು, ಈ ಆಸಕ್ತಿದಾಯಕ ಅಂಶವನ್ನು ಅಳೆಯಲು, ಉತ್ತಮವಾಗಿ ವಿನ್ಯಾಸಗೊಳಿಸಿದ ಪ್ರಶ್ನಾವಳಿಯೊಂದನ್ನು ಬಳಸಿ ಕಂಡುಕೊಂಡ ಸಂಗತಿಗಳ ಪ್ರಕಾರ, ಹದಿನಾಲ್ಕರಿಂದ ಹದಿನೆಂಟರ ವಯೋಮಾನದ ಅವಧಿಯಲ್ಲಿ ಈ ಸಹವರ್ತಿ ಪ್ರಭಾವವು

ಒಂದೇ ಸಮನೆ ಹೆಚ್ಚುತ್ತಾ ಹೋಗುತ್ತದೆ. ಈ ಪ್ರಶ್ನಾವಳಿಯ ಪ್ರಕಾರ, ನೀವು ಒಂದಷ್ಟು ಹೇಳಿಕೆಗಳ ಜೋಡಿ ಸರಣಿಯಲ್ಲಿ, ಒಂದು ಹೇಳಿಕೆಯನ್ನು ಆಯ್ಕೆ ಮಾಡಬೇಕಾಗುತ್ತದೆ. ಹೀಗೆ ಆಯ್ಕೆ ಮಾಡಿದ ವಾಕ್ಯವು ಎಷ್ಟರಮಟ್ಟಿಗೆ ನಿಮ್ಮನ್ನು ವಿವರಿಸುತ್ತದೆ ಎನ್ನುವುದನ್ನು ಗುರುತಿಸಬೇಕಾಗುತ್ತದೆ. ಉದಾಹರಣೆಗೆ, 'ಗುಂಪಿನಲ್ಲಿ ಸೇರುವುದಕ್ಕಿಂತ ಪ್ರತ್ಯೇಕವಾಗಿ ಇರುವುದು ಬಹಳ ಮುಖ್ಯ ಎಂದು ಕೆಲವರು ಆಲೋಚಿಸುತ್ತಾರೆ'. ಆದರೆ, 'ಇನ್ನು ಕೆಲವರು, ಪ್ರತ್ಯೇಕವಾಗಿ ಹೊರಗಿರುವುದಕ್ಕಿಂತ ಗುಂಪಿನೊಡನೆ ಇರುವುದು ಬಹಳ ಮುಖ್ಯವೆಂದು ಆಲೋಚಿಸುತ್ತಾರೆ', ಮತ್ತು 'ಕೆಲವರು ತಮ್ಮ ಸ್ನೇಹಿತರನ್ನು ಸಂತೋಷದಲ್ಲಿಡಲಷ್ಟೇ ಸ್ನೇಹಿತರೊಂದಿಗೆ ಸೇರಿಕೊಳ್ಳುತ್ತಾರೆ'. ಆದರೆ 'ಇನ್ನು ಕೆಲವರು ತಮ್ಮ ಸ್ನೇಹಿತನಿಗೆ ದುಃಖವಾಗುತ್ತದೆ ಎಂದು ತಿಳಿದಿದ್ದರೂ, ಸ್ನೇಹಿತರ ಇಚ್ಛೆಗೆ ಅನುಗುಣವಾಗಿ ನಡೆದುಕೊಳ್ಳಲು ನಿರಾಕರಿಸುತ್ತಾರೆ.'

ಸ್ಟೈಯಿನ್‌ಬರ್ಗ್ ಅವರು ಅಮೆರಿಕದಲ್ಲಿ ನಡೆಸಿದ ಸಂಶೋಧನೆಯು, ಸಹವರ್ತಿಗಳ ಪ್ರಭಾವಕ್ಕೆ ಕ್ರಮೇಣವಾಗಿ ಪ್ರತಿರೋಧ ಹೆಚ್ಚುವ ವಿದ್ಯಮಾನವು, ಹುಡುಗ ಹುಡುಗಿಯರಲ್ಲಿ ಮತ್ತು ವಿವಿಧ ಜನಾಂಗೀಯ ಮತ್ತು ಸಾಮಾಜಿಕ ವರ್ಗಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತಿರುವುದನ್ನು ತೋರಿಸಿಕೊಟ್ಟಿದೆ. ಹತ್ತರಿಂದ ಹದಿನಾಲ್ಕರ ವಯೋಮಾನದವರಲ್ಲಿ ಇಂತಹ ಪ್ರತಿರೋಧ ಅತ್ಯಂತ ಕಡಿಮೆ ಇರುತ್ತದೆ. ಭಾವನಾತ್ಮಕವಾಗಿ ತನ್ನ ತಂದೆ ತಾಯಿಯರಿಂದ ಸ್ವತಂತ್ರಗೊಂಡ ಹದಿಹರೆಯದವಳೊಬ್ಬಳು, ಭಾವನಾ ಸ್ವಾಯತ್ತತೆಗೆ ಸಿದ್ಧಳಾಗುವ ಮುನ್ನ, ಆಕೆಯ ಸ್ನೇಹಿತರು ಭಾವನಾ ಸುರಕ್ಷಾ ಜಾಲವನ್ನು ರೂಪಿಸುತ್ತಾರೆ. ಇದರಿಂದ ತನ್ನ ತಂದೆ ತಾಯಿಯನ್ನು ಅವಲಂಬಿಸಿದ್ದ ಆಕೆ, ಈಗ ಸಹವರ್ತಿಗಳನ್ನು ಅವಲಂಬಿಸತೊಡಗುತ್ತಾಳೆ. ಹದಿಹರೆಯದವಳು ಹದಿನೆಂಟರ ಹರೆಯಕ್ಕೆ ಕಾಲಿಡುತ್ತಿದ್ದಂತೆ, ತನ್ನ ಸಹವರ್ತಿಗಳಿಂದಲೂ ಕೂಡ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆಯುವ ಸ್ವವ್ಯಕ್ತಿತ್ವದ ಮನೋಭಾವವನ್ನು ಬೆಳೆಸಿಕೊಂಡಿರುತ್ತಾಳೆ ಎಂದು ಸ್ಟೈಯಿನ್‌ಬರ್ಗ್ ಹೇಳುತ್ತಾರೆ. ಅವರ ಮಾತಿನಲ್ಲೇ ಹೇಳುವುದಾದರೆ, '. . . . ಸಹವರ್ತಿ ಪ್ರಭಾವಕ್ಕೆ ಹೆಚ್ಚುತ್ತಿರುವ ಪ್ರತಿರೋಧವು, ತಂದೆ ತಾಯಂದಿರಿಂದ ಪ್ರತ್ಯೇಕಗೊಳ್ಳುವಲ್ಲಿಂದ ಪ್ರಾರಂಭವಾಗಿ, ಸ್ವವ್ಯಕ್ತಿತ್ವದ ಮನೋಭಾವದ ಬೆಳವಣಿಗೆಯನ್ನೊಳಗೊಂಡ ಅಂತ್ಯವನ್ನು ಹೊಂದಿರುವ, ಒಂದು ಬೆಳವಣಿಗೆಯ ವಿದ್ಯಮಾನವೆಂದು ಊಹಿಸಬಹುದು'. ನಮ್ಮ ಸನ್ನಿವೇಶಕ್ಕೂ ಈ ಬೆಳವಣಿಗೆಯ ವಿದ್ಯಮಾನವು ಅನ್ವಯವಾಗುತ್ತದಾದರೂ ವಯಸ್ಸುಗಳಲ್ಲಿ ವ್ಯತ್ಯಾಸ ಕಂಡುಬರಬಹುದು.



ವಿದ್ಯಾರ್ಥಿಗಳಿಗೆ ಸವಾಲಾಗುವ ಶೈಕ್ಷಣಿಕ (academic) ಕೆಲಸವನ್ನು ನೀಡಿ. ಈ ವಯಸ್ಸಿನಲ್ಲಿ ನಿಮ್ಮ ವಿದ್ಯಾರ್ಥಿಗಳು ಪರಿಕಲ್ಪನಾತ್ಮಕವಾಗಿ ಸವಾಲೊಡ್ಡುವ ಕೆಲಸದಲ್ಲಿ ತೊಡಗಿಸಿಕೊಳ್ಳಲು ಶಕ್ತರಾಗಿರುತ್ತಾರೆ.

- ಶಾಲೆಯಲ್ಲಿ ಕಲಿಯುತ್ತಿರುವ ವಿವಿಧ ವಿಷಯಗಳಿಗೆ ಸಂಬಂಧಿಸಿದ ಉತ್ತಮ ಗುಣಮಟ್ಟದ ಪುಸ್ತಕಗಳನ್ನು ಪರಿಚಯಿಸಿ, ಅವುಗಳನ್ನು ಅವರೊಂದಿಗೆ ಓದಿ ವಿಶ್ಲೇಷಿಸಿಕೊಳ್ಳಿ. ಅವು ಸಂಪಾದಕೀಯಗಳು, ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕಗಳಲ್ಲಿನ ಲೇಖನಗಳು ಹಾಗು ಉತ್ತಮ ಪುಸ್ತಕಗಳಿಂದ ಆಯ್ದುಕೊಂಡ ತುಣುಕುಗಳಾಗಿರಬಹುದು.
- ಕೇವಲ ಉತ್ತರಗಳನ್ನು ಪುನರಾವರ್ತಿಸುವುದು ಅಥವಾ ವಿಷಯಗಳನ್ನು ಉರುಹೊಡೆಯುವುದಕ್ಕೆ ಅವರ ಜ್ಞಾನಗ್ರಹಿಕೆಯ ಸಾಮರ್ಥ್ಯಗಳನ್ನು ಸೀಮಿತಗೊಳಿಸಬೇಡಿ. ಹಾಗೆ ಮಾಡುವುದರಿಂದ, ಅವರ ಅಮೂರ್ತೀಕರಣದ ಉತ್ತಮ ಸಾಮರ್ಥ್ಯವನ್ನು ಅಸಮರ್ಪಕವಾಗಿ ಬಳಸಿಕೊಂಡಂತಾಗುತ್ತದೆ.
- ವಿಶೇಷವಾಗಿ ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ, ವಿದ್ಯಾರ್ಥಿಗಳು ಹೆಚ್ಚೆಚ್ಚು ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಅವರು ಕೊನೆಯಿಲ್ಲದ 'ವ್ಯಾಸಂಗ'ದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವಾಗ, ಜ್ಞಾನಗ್ರಹಿಕೆಗೆ ಸಂಬಂಧಿಸಿದ ಎಂತಹ ಸವಾಲುಗಳನ್ನು ತಮಗಾಗಿ ಹುಟ್ಟು ಹಾಕಿಕೊಳ್ಳುತ್ತಾರೆ ಎಂಬುವುದು ಸ್ಪಷ್ಟವೇ ಇಲ್ಲ. ಆದರೆ, ಒಬ್ಬ ಭಾವನಾಮಯಿ ಮತ್ತು ಸಿದ್ಧಶಿಕ್ಷಕರಿಂದ ಅವರು ಕಲಿತಾಗ, ಅಥವಾ ಪರಿಕಲ್ಪನಾತ್ಮಕವಾಗಿ ಅದ್ಭುತವಾಗಿರುವ ವಿಷಯ ಸಾಮಗ್ರಿಗಳೊಂದಿಗೆ ಕೆಲಸ ಮಾಡಿದಾಗ, ಗ್ರಹಿಕಾ ಸಾಮರ್ಥ್ಯಗಳು ನಿಜಕ್ಕೂ ವಿಸ್ತಾರಗೊಂಡು ಬಳಕೆಗೊಳಗಾಗುತ್ತವೆ. ಹೀಗಾಗಿ, ಅವರು ವಿವಿಧ ರೀತಿಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ಎಷ್ಟೆಷ್ಟು ಸಮಯವನ್ನು ಯಾವ ಯಾವ ಅನುಪಾತದಲ್ಲಿ ಕಳೆಯುವರೆಂದು ಗಮನಿಸಿ, ಅವರ ಜ್ಞಾನಗ್ರಹಿಕೆಯ ಸವಾಲಿನ ಸಾಮರ್ಥ್ಯವನ್ನು ಅತ್ಯಧಿಕಗೊಳಿಸಲು ಪ್ರಯತ್ನಿಸಿ.
- ಹದಿಹರೆಯದ ಹೊತ್ತಿಗೆ, ವಿದ್ಯಾರ್ಥಿಗಳಿಗೆ ಬಹಳಷ್ಟು ವಿದ್ಯಮಾನಗಳ ಪರಿಚಯವಾಗಿದ್ದರೂ, ಈ ಕಲಿಕೆಗಳನ್ನು ಅವರ ಪಠ್ಯಗಳಲ್ಲಿನ ಕಲಿಕೆಯೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಲು ಅವರಿಗೆ ನಾವು ಸಾಧ್ಯವಾದಷ್ಟೂ ಸಹಾಯ ಮಾಡದಿರುವುದು ವಿಷಾದನೀಯವೇ ಸರಿ. ಅವರು ಜ್ಞಾನ ಮತ್ತು ಕೌಶಲಗಳ ಒಂದು ಉತ್ತಮ ಭಂಡಾರವನ್ನು ನಿರ್ಮಿಸಿಕೊಂಡಿರುತ್ತಾರೆ. ಹಾಗಾಗಿ, ಈಗಾಗಲೇ ಇರುವ ಜ್ಞಾನ ಮತ್ತು ಅನುಭವಗಳ ವಿಶಾಲ ತಳಹದಿಯೊಂದಿಗೆ ಸಹಸಂಬಂಧವನ್ನು ಕಲ್ಪಿಸಿಕೊಳ್ಳುವ ಮೂಲಕ ಹೊಸ ಜ್ಞಾನಾರ್ಜನೆ ಸಾಧ್ಯವಾಗುತ್ತದೆ. ಉದಾಹರಣೆಗೆ, ಒತ್ತಡವೆಂಬ ವಿಷಯವನ್ನು ಪ್ರೆಷರ್ ಕುಕ್ಕರ್, ಬ್ರೇಕ್, ಪಂಪ್‌ಗಳು, ಮುಂತಾದ ಉದಾಹರಣೆಗಳ ಮೂಲಕ ಕಲಿಸಬಹುದು. ವಾರ್ತೆ, ಜಾಹೀರಾತು, ಭಾಷಣ, ಸಂಭಾಷಣೆ ಮತ್ತು ಪತ್ರಗಳಲ್ಲಿನ ಭಾಷಾ ಬಳಕೆಯ ವಿಧಾನದ ಉದಾಹರಣೆಗಳನ್ನು ಉಪಯೋಗಿಸಿಕೊಂಡು ಇಂಗ್ಲಿಷ್ ಭಾಷೆಯನ್ನು ಕಲಿಸಬಹುದು. ಇವೆಲ್ಲವುಗಳ ಜೊತೆ ಹದಿಹರೆಯದವರಿಗೆ ಸಾಕಷ್ಟು ಅನುಭವಗಳು ಇದ್ದೇ ಇರುತ್ತದೆ. ಆದ್ದರಿಂದ ಅವರ ಅನುಭವಗಳನ್ನೇ ಉಪಯೋಗಿಸಿಕೊಳ್ಳಿ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಜ್ಞಾನವು ಪ್ರತ್ಯೇಕಿತ ಅಭೇದ್ಯ ಅಂಕಣಗಳಲ್ಲಿರುತ್ತದೆ ಎಂದು ಪರಿಗಣಿಸಬೇಡಿ.

ಹದಿಹರೆಯದವರು ಮತ್ತು ವಯಸ್ಕರು ಪರಸ್ಪರ ಸಂವಾದ ನಡೆಸಲು ಸಮಯಾವಕಾಶ ಮಾಡಿಕೊಡಿ. ಮೊದಲೇ ವಿವರಿಸಿದಂತೆ, ಈ ವಯೋಮಾನದ ಗುಂಪಿನ ಒಂದು ಜ್ಞಾನಗ್ರಹಿಕೆಯ ಬೆಳವಣಿಗೆಯೆಂದರೆ ಈಗಾಗಲೇ ಇರುವ ಚೌಕಟ್ಟು ಮತ್ತು ಸಂಪ್ರದಾಯಗಳನ್ನು ಪ್ರಶ್ನಿಸುವ ಸಾಮರ್ಥ್ಯವಾಗಿರುತ್ತದೆ. ವಿರೋಧಾಭಾಸವೆಂಬಂತೆ ಅವರೂ ಕೂಡ ತಮ್ಮ ಸಹವರ್ತಿಗಳ ಪ್ರಭಾವದ ಹಿಡಿತದಲ್ಲಿರುತ್ತಾರೆ. ಅದರರ್ಥ ಹಿರಿಯರ ಸಂಪ್ರದಾಯಗಳನ್ನು ಧೈರ್ಯವಾಗಿ ತಿರಸ್ಕರಿಸುವ ಅವರು, ಸುಲಭವಾಗಿ ತಮ್ಮ ಸಹವರ್ತಿಗಳ ಆಶಯಕ್ಕನುಗುಣವಾಗಿ ನಡೆದುಕೊಂಡು ಬಿಡುತ್ತಾರೆ. 'ವಸ್ತುಗಳ ಯಥಾಸ್ಥಿತಿ'ಯನ್ನು ಪ್ರಶ್ನಿಸುವ ಅವರ ಸಾಮರ್ಥ್ಯದ ವ್ಯಾಪ್ತಿಯನ್ನು, ದೂರದರ್ಶನ, ಚಲನಚಿತ್ರ ಅಥವಾ ಪರಸ್ಪರರಿಂದ-ಪಡೆಯುವ ಪ್ರಬಲ ಸಂದೇಶಗಳೂ ಒಳಗೊಳ್ಳುವಂತೆ ವಿಸ್ತರಿಸಬಹುದು. ಈಗ ನೀವು ನಿಮ್ಮ ವಿದ್ಯಾರ್ಥಿಗಳೊಡನೆ ಜಾಹೀರಾತುಗಳು, ಕೊಳ್ಳುಬಾಕತನ, ನಮ್ಮ ಜೀವನಶೈಲಿ ಪರಿಸರದ ಮೇಲೆ ಬೀರಬಹುದಾದ ಪರಿಣಾಮ, ಸಾಮಾಜಿಕ ಅಸಮತೆ, ಸಂಬಂಧ, ನೈತಿಕತೆ, ಹಾಗು ಸ್ವಾತಂತ್ರ್ಯ ಮತ್ತು ಸಮಾಜ ವ್ಯವಸ್ಥೆ ಮುಂತಾದ ವಿಚಾರಗಳ ಬಗ್ಗೆ ಚರ್ಚಿಸಬಹುದು. ಅದೃಷ್ಟಕ್ಕೆ, ಇವು ಆಸಕ್ತಿದಾಯಕ ಆರಾಮ ವೇದಾಂತಗಳಷ್ಟೇ ಆಗಿರದೆ, ನಿಮ್ಮ ಮತ್ತು ನಿಮ್ಮ ವಿದ್ಯಾರ್ಥಿಗಳ ದೈನಂದಿನ ಜೀವನದೊಂದಿಗೆ ಸಂಬಂಧವಿರುವಂತಹವಾಗಿವೆ. ರೋಜರ್ ಇದನ್ನು ಉತ್ತಮವಾಗಿ ಹೀಗೆ ಮಂಡಿಸುತ್ತಾರೆ:

> ಶಿಕ್ಷಣವೆಂಬುದು ಗಮನಿಸುವ, ಗ್ರಹಿಸುವ, ಭಾವಿಸುವ, ಯೋಚಿಸುವ ಮತ್ತು ಮಾಡುವ ರೂಢಿಗತ (ಅನೈಚ್ಛಿಕ) ರೀತಿಗಳ ಬಗ್ಗೆ ಎಳೆಯರಿಗೆ ಅರಿವು ಮೂಡಿಸುವ ಮತ್ತು ಅವುಗಳಿಂದ ತಮ್ಮನ್ನು ತಾವು ಬಿಡುಗಡೆಗೊಳಿಸಿಕೊಳ್ಳುವ ವ್ಯವಸ್ಥೆಯಾಗಿರುತ್ತದೆ. ಜೊತೆಗೆ, ಈ ಎಲ್ಲ ಮೂಲಭೂತ ಸ್ವಯಂ ಪ್ರಕ್ರಿಯೆಗಳಿಗೆ ಮತ್ತು ಪ್ರಪಂಚದಲ್ಲಿ ಅಸ್ತಿತ್ವ ಹೊಂದುವ ರೀತಿಗಳಿಗೆ ಹೆಚ್ಚಿನ ಜ್ಞಾನಾಧಾರಿತ ದೃಷ್ಟಿಕೋನಗಳನ್ನು ಬೆಳೆಸುವ ಮೂಲಕ ಸೃಜನಶೀಲತೆ, ವೈಚಾರಿಕ ಸ್ವಾತಂತ್ರ್ಯ ಮತ್ತು ಅಗಾಧ ಸಂಖ್ಯೆಯಲ್ಲಿರುವ ವೈಯಕ್ತಿಕ ಮತ್ತು ಸಾಮಾಜಿಕ ಪುನಃಶ್ಚೇತನಕ್ಕೆ ಬೇಕಾಗುವ ಪೂರ್ವಸ್ಥಿತಿಯನ್ನು ಹೊಂದುವಂತೆ ಸಹಾಯ ಮಾಡುವುದು ಕೂಡ ಶಿಕ್ಷಣವೆನಿಸಿಕೊಳ್ಳುತ್ತದೆ.

ಈ ಸಂವಾದಗಳು ಅರ್ಥಪೂರ್ಣವಾಗಬೇಕೆಂದರೆ, ನೀವು ಪರಸ್ಪರ ಗೌರವ ವಾತ್ಸಲ್ಯಗಳಿಗೆ ಅವಕಾಶವನ್ನು ಸೃಷ್ಟಿಸಿಕೊಡಲೇಬೇಕು. ಅಲ್ಲಿ ವಿದ್ಯಾರ್ಥಿಗಳು ಹಾಗು ಶಿಕ್ಷಕರು ತಮ್ಮ ಆಲೋಚನೆ, ಭಾವನೆ ಮತ್ತು ಅಭಿಪ್ರಾಯಗಳನ್ನು ಮುಕ್ತವಾಗಿ ವಿನಿಮಯ ಮಾಡಿಕೊಳ್ಳುವಂತಿರಬೇಕು. ಅಂತಹ ಸಂವಾದ ಕಾರ್ಯಕ್ರಮಗಳಿಗೆ ಸಹಾಯವಾಗುವ ಕೆಲವು ಸಲಹೆಗಳನ್ನು **ಬಾಕ್ಸ್ 2**ರಲ್ಲಿ ನೀಡಲಾಗಿದೆ.

ಹದಿಹರೆಯದ ಅಪಾಯಗಳು ಮತ್ತು ಭರವಸೆಗಳು

ಲೈಂಗಿಕತೆ, ಮಾದಕದ್ರವ್ಯ ಸೇವನೆ ಮತ್ತು ಅತಿವೇಗದ ವಾಹನ ಚಾಲನೆಯೇ ಮೊದಲಾದ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವ ಹದಿಹರೆಯದವರ ಪರಿಚಿತ ವರ್ತನೆಗಳ ಬಗ್ಗೆ ಎಲ್ಲರೂ ಕೇಳಿರುತ್ತಾರೆ. ಈ ಅಪಾಯಕಾರಿ ವರ್ತನೆಗಳ ಪರಿಣಾಮಗಳ ಬಗ್ಗೆ ನಿರ್ಣಯ ಕೈಗೊಳ್ಳಲು ಹದಿಹರೆಯದವರಿಗೆ ಆಗುವುದಿಲ್ಲ ಎನ್ನುವುದು ಈ ವಿದ್ಯಮಾನದ ಕುರಿತ ಎಲ್ಲರ ಮೆಚ್ಚಿನ ವಿವರಣೆ. ಉದಾಹರಣೆಗೆ, ತಾನು ಸಾವಿಲ್ಲದವ/ಳು ಎಂದು ಭಾವಿಸುವುದು ಅಥವಾ, ತಾನು ಎಂದೂ ವ್ಯಸನಿಯಾಗುವುದಿಲ್ಲ ಅಥವಾ ಗರ್ಭಿಣಿಯಾಗುವುದಿಲ್ಲ ಎಂದುಕೊಳ್ಳುವುದು.

ಬಾಕ್ಸ್ 2

ಹದಿಹರೆಯದವರೊಂದಿಗೆ ಸಂವಾದ: ಅವಕಾಶಗಳ ಸೃಷ್ಟಿ

ಜೀವನದಲ್ಲಿನ ಕೆಲವು ಪ್ರಮುಖ ಹಾಗು ಗಂಭೀರ ವಿಷಯಗಳ ಕುರಿತು ನಮ್ಮ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲು ನಿರಂತರ ಸಂವಾದ ಕೂಟಗಳೇ ಸೂಕ್ತ. ಹದಿಮೂರರಿಂದ ಹದಿನೆಂಟು ವರ್ಷದೊಳಗಿನ ಮಕ್ಕಳೊಂದಿಗೆ ಇಂತಹ ಸಂವಾದಗಳನ್ನು ನಡೆಸಿಕೊಡುವಲ್ಲಿ ಉಪಯುಕ್ತವೆನಿಸುವ ಕೆಲವು ಸಲಹೆಗಳು ಇಲ್ಲಿವೆ.

- ಶಿಕ್ಷಕರಾಗಿ ನೀವಿಲ್ಲಿ ಅನುಕೂಲಕಾರರು ಮಾತ್ರ. ಇಲ್ಲಿ ನೀವು ಚರ್ಚೆಗೆ ಮಾರ್ಗದರ್ಶನ ನೀಡುತ್ತೀರಿ. ಆದರೆ ಅವು ಚರ್ಚೆಗೆ ಅಡ್ಡಿಪಡಿಸುವ ಹಂತಕ್ಕೆ ಹೋಗಬಾರದು. ನೀವು ನಿರ್ದೇಶನಗಳನ್ನೇ ನೀಡದೆ, ಅದನ್ನೊಂದು ಮುಕ್ತ 'ಹರಟೆ'ಯಾಗಲು ಅನುವು ಮಾಡಿಕೊಡಬಹುದು. ಆದರೆ, ನನ್ನ ಅನುಭವದಲ್ಲಿ ಹೇಳುವುದಾದರೆ, ಸಂವಾದವು ವಿಷಯ ಕೇಂದ್ರಿತವಾಗಿದ್ದಾಗ (focussed) ಪ್ರತಿಯೊಬ್ಬರಲ್ಲಿಯೂ ಸುಸಂಬದ್ಧತೆಯ ಮತ್ತು ಸಂತೃಪ್ತಿಯ ಮನೋಭಾವ ಉಂಟಾಗುತ್ತದೆ. ಒಂದು ವಿಷಯ ಅಥವಾ ಪ್ರಶ್ನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸಂವಾದಕ್ಕೆ ಚಾಲನೆಯನ್ನು ಒದಗಿಸುವುದು ಒಳ್ಳೆಯದು. ಆದರೆ, ಅನಿರೀಕ್ಷಿತ ವಿಷಯವೊಂದನ್ನು ಪ್ರಸ್ತಾಪಿಸಲು ಮಗುವಿಗೆ ಯಾವಾಗಲೂ ಮುಕ್ತಾವಕಾಶ ಇರುವಂತೆ ನೋಡಿಕೊಳ್ಳಿ.
- ಪ್ರತಿಯೊಬ್ಬರ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳಬೇಕು. ದೊಡ್ಡ ತರಗತಿಗಳಲ್ಲಿ ಇದೊಂದು ನಿಜವಾದ ಸವಾಲು. ಸಣ್ಣ ತರಗತಿಗಳಲ್ಲಿಯೂ ಕೂಡ ಇದನ್ನು ನೀವು ಗಮನವಿಟ್ಟು ನೋಡಿಕೊಳ್ಳಬೇಕಾಗುತ್ತದೆ. ಇಲ್ಲಿ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವುದೆಂದರೆ, ಪ್ರತಿಯೊಂದು ಮಗುವನ್ನು ಮಾತನಾಡಲು ಒತ್ತಾಯಿಸುವುದಲ್ಲ. ಮೌನವಾಗಿ ಆಲಿಸುವುದಕ್ಕೂ ತನ್ನದೇ ಆದ ಬೆಲೆ ಇದೆಯಾದರೂ, ಅವರು ಚರ್ಚೆಯಿಂದ ಸಂಪೂರ್ಣವಾಗಿ 'ವಿಮುಖರಾಗದಂತೆ' ಎಚ್ಚರವಹಿಸಿ. ನೀವಿಲ್ಲಿ ಎರಡು ಸರಳ ತಂತ್ರಗಳನ್ನು ಉಪಯೋಗಿಸಬಹುದು. ಅವುಗಳೆಂದರೆ, ಅವರ ಅಭಿಪ್ರಾಯಗಳನ್ನು ಕೇಳುವುದು ಮತ್ತು ಗುಂಪಿನಲ್ಲಿ ಮೌನವಾಗಿರುವವರ ಮೇಲೆ ಗಮನವಿಟ್ಟು, ಅವರಿಗೆ ಆಗೊಮ್ಮೆ ಈಗೊಮ್ಮೆ ಪ್ರಶ್ನೆಯೊಂದನ್ನು ಎಸೆಯುವುದು.
- ಕೆಲವು ವಿದ್ಯಾರ್ಥಿಗಳು ತಮ್ಮ ಆಲೋಚನೆಗಳನ್ನು ಮಾತಿನ ಮೂಲಕ ಹೇಳಲು ಬಯಸುವ ಮುನ್ನ, ತಮ್ಮೆಲ್ಲ ಆಲೋಚನೆಗಳನ್ನು ಕ್ರೋಢೀಕರಿಸಿ ವಾಕ್ಯರೂಪದಲ್ಲಿ ರಚಿಸಿಕೊಳ್ಳಬೇಕಾಗುತ್ತದೆ. ಇನ್ನು ಕೆಲವರಿಗೆ ಆಲೋಚನೆಗಳನ್ನು ಹಾಗೆಯೇ ಹೇಳಿಕೊಳ್ಳಲು ಹಿಂಜರಿಕೆ ಇರುವುದಿಲ್ಲ. ಹಾಗಾಗಿ, ಎರಡೂ ರೀತಿಯ ವಿದ್ಯಾರ್ಥಿಗಳು ಭಾಗವಹಿಸಲು ಅನುವು ಮಾಡಿಕೊಡುವಂತಹ ದಾರಿಗಳನ್ನು ಕಂಡುಕೊಳ್ಳಿರಿ. ಉದಾಹರಣೆಗೆ, ಪ್ರತಿಯೊಂದು ಮಗುವಿಗೂ ತನ್ನ ಆಲೋಚನೆಯನ್ನು ಪೂರ್ಣಗೊಳಿಸಲು ಅಗತ್ಯವಿರುವ ಸಮಯವನ್ನು ನೀಡಿ. ಅಡೆತಡೆಗಳು ಯಾವುದೇ ಸಂವಾದಕ್ಕೆ ಮಾರಕವಾಗಿರುತ್ತವೆ. ಹಾಗೆಂದು. ಒಂದು ಹಂತದಾಚೆಗೆ

ಅವುಗಳನ್ನು ಸಂಪೂರ್ಣವಾಗಿ ನಿವಾರಿಸುವುದೂ ಸಾಧ್ಯವಿಲ್ಲ. ಹಾಗಿದ್ದೂ, ಬೇರೆಯವರೂ ಮಾತನಾಡಲು ಬಯಸುತ್ತಿರಬಹುದು ಅಥವಾ ಆಲೋಚನೆಯನ್ನು ಪೂರ್ತಿಗೊಳಿಸುತ್ತಿರಬಹುದು, ಅದಕ್ಕೆ ಅವಕಾಶ ನೀಡಬೇಕು ಎಂಬ ಬಗ್ಗೆ ಎಲ್ಲರಲ್ಲಿ ಅರಿವು ಮೂಡಿಸಿ.

- ಭಾಷೆ ಮತ್ತು ಶಬ್ದಭಂಡಾರ ಸರಳವಾಗಿರಬಹುದು. ಕೆಲವು ಗುಂಪುಗಳಲ್ಲಿ, ಮತ್ತು '. . . .', 'ಅಂದರೆ . . . .', 'ಅಂತಹುದು ಯಾವುದು . . . .', 'ಯಾವುದಾದರೊಂದು' ಇತ್ಯಾದಿ ಅಪೂರ್ಣ ವಾಕ್ಯಗಳನ್ನು ಬಳಸಿ ಮಾತನಾಡಲು ಉತ್ತೇಜಿಸಬಹುದು. ಆದರೆ, ಕಾಲಕ್ರಮೇಣ, ಪೂರ್ಣವಾಕ್ಯವನ್ನು ಸ್ಪಷ್ಟ ಮಾತಿನಲ್ಲಿ ವ್ಯಕ್ತಪಡಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಒಳ್ಳೆಯದು. ಹಾಗೆ, ತಮ್ಮದೇ ಅನಿಸಿಕೆ ಮತ್ತು ಭಾವನಾತ್ಮಕ ಸ್ಥಿತಿಗಳನ್ನು ಸ್ಪಷ್ಟ ಮಾತಿನಲ್ಲಿ ಅಭಿವ್ಯಕ್ತಗೊಳಿಸುವಂತಾಗುವುದು ಕಲಿಯಲು ಯೋಗ್ಯವಾದ ಕೌಶಲ.
- ಇದು, ಎಲ್ಲರೂ ಅವರವರ ಭಾವನೆ, ಅಭಿಪ್ರಾಯ ಮತ್ತು ಆಲೋಚನೆಗಳನ್ನು ಮುಕ್ತವಾಗಿ ಮತ್ತು ಯಾವುದೇ ಮೌಲ್ಯಮಾಪನದ ಭೀತಿಯಿಲ್ಲದೆ ಹಂಚಿಕೊಳ್ಳ ಬಯಸುವ 'ಸುರಕ್ಷಿತ ಜಾಗ'ವಾಗಬೇಕು. ಇಂತಹ ಜಾಗವನ್ನು ಸೃಷ್ಟಿಸಲು ಪ್ರಯಾಸ ಪಡಬೇಕಾಗುತ್ತದೆ. ಇದಕ್ಕೆ ಒಂದು ಮಾರ್ಗದರ್ಶಿ ಸೂತ್ರವೆಂದರೆ, ಶಿಕ್ಷಕರು ಇದನ್ನು 'ಬೈಗುಳ'ದ ಅಥವಾ ನೀತಿಬೋಧನೆಯ (ಅದೆಷ್ಟೇ ಸೂಕ್ಷ್ಮವಾಗಿರಲಿ) ಅವಧಿಯನ್ನಾಗಿಸುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು. ಒಂದು ವೇಳೆ ಹಾಗೆ ಮಾಡಿದ್ದು ವಿದ್ಯಾರ್ಥಿಗಳ ಗಮನಕ್ಕೆ ಬಂದಿತೆಂದರೆ ಅಥವಾ ಅವರು ಹಾಗೆ ಅಂದುಕೊಂಡರೂ ಸಾಕು, ತಕ್ಷಣ ಮೌನವಾಗಿ ಬಿಡುತ್ತಾರೆ.

ಬಹುಶಃ, ನಾವು ಶಿಕ್ಷಕರಾಗಿ ಇಂತಹ ಸಂವಾದದಿಂದ ಮಹತ್ತರವಾದ ನಿರೀಕ್ಷೆಗಳನ್ನು ಇಟ್ಟುಕೊಳ್ಳದಿರುವುದೇ ಒಳ್ಳೆಯದು. ಇಂತಹ ನಿರೀಕ್ಷೆಯನ್ನು ಇಟ್ಟುಕೊಂಡದ್ದೇ ಆದರೆ ಎರಡು ಕಾರಣಗಳಿಂದಾಗಿ ನಾವು ನಿರಾಶೆಯನ್ನು ಅನುಭವಿಸುವ ಅಪಾಯವಿದೆ. ಒಂದು, ಅವರು ಮುಕ್ತ ಸಂವಹನದಿಂದ ಹಿಂದಕ್ಕೆ ಸರಿಯಬಹುದು. ಎರಡು, ಅವರ ವರ್ತನೆಗಳು ಅವರ ಮಾತಿನ ಪ್ರಬುದ್ಧತೆಗೆ ಹೊಂದಾಣಿಕೆಯಾಗದಿರಬಹುದು. ಈ ಅಧ್ಯಾಯದ ಕೊನೆಯ ಭಾಗದಲ್ಲಿ ವಿವರಿಸಿದಂತೆ, ಹದಿಹರೆಯದವರು ಸಂಕೀರ್ಣ ಮಾತುಗಾರಿಕೆಯ ಸಾಮರ್ಥ್ಯವನ್ನು ಬಹಳಷ್ಟು ಹೊಂದಿದ್ದರೂ, ಸಾಮಾನ್ಯವಾಗಿ ನಮಗೆ ಗೋಚರಿಸುವಷ್ಟು 'ಹಿಡಿತ'ವನ್ನು ಹೊಂದಿರುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಶಾಲೆಗಳು ಮತ್ತು ಇತರ ಸಮುದಾಯಗಳು ಆಗಿಂದಾಗ್ಗೆ ಈ ವಿಷಯಗಳನ್ನು ಕುರಿತು ಹದಿಹರೆಯದವರಿಗೆ ಶಿಕ್ಷಣ ನೀಡಿ, ಅವರ ಅರಿವನ್ನು ಹೆಚ್ಚಿಸುತ್ತಿದ್ದಾರೆ. ಅರಿವು ಮೂಡಿಸುವ ಈ ಕಾರ್ಯಕ್ರಮಗಳು ಅವರ ವರ್ತನೆಯ ಮೇಲೆ ಸ್ವಲ್ಪ ಪರಿಣಾಮ ಬೀರಬಹುದು. ಆದರೆ, ಎಲ್ಲ ಸಂಗತಿಗಳನ್ನು 'ತಿಳಿದಿರುವ' ಹದಿಹರೆಯದವರನ್ನೂ ಒಳಗೊಂಡ ಬಹುತೇಕರು ಅಪಾಯಕಾರಿ ವರ್ತನೆಗಳಲ್ಲಿ ತೊಡಗಿಕೊಳ್ಳುವುದನ್ನು ಮುಂದುವರಿಸುತ್ತಾರೆ. ಸ್ಟೈಯಿನ್‌ಬರ್ಗ್ ಹೇಳುವಂತೆ,


ಜನಜಾಗೃತಿ ಆಂದೋಲನಗಳು ಮತ್ತು ಅಪಾಯಕಾರಿ ವರ್ತನೆಗಳ ಮಟ್ಟ ಕಡಿಮೆಯಾಗುವುದರ ನಡುವೆ, ವಾಸ್ತವದಲ್ಲಿ ಯಾವುದೇ ಸಂಬಂಧವಿಲ್ಲ. ಅಷ್ಟಕ್ಕೂ, ಜ್ಞಾನಗ್ರಹಿಕೆಯ ಬೆಳವಣಿಗೆಗೆ ಸಂಬಂಧಿಸಿದ ಅಧ್ಯಯನಗಳಿಂದ ನಾವು ಕಂಡುಕೊಂಡಂತೆ, ಚಿಕ್ಕಮಕ್ಕಳಿಗಿಂತ ಹದಿಹರೆಯದವರು ಹೆಚ್ಚು ವಿಮರ್ಶಾತ್ಮಕ ಮತ್ತು ತರ್ಕಬದ್ಧ ಯೋಚನಾಕಾರರಾಗಿರುತ್ತಾರೆ. ಅದಕ್ಕಿಂತ ಹೆಚ್ಚಾಗಿ ಅವರು ಅತಿರೇಕದ ವಾಹನ ಚಾಲನೆಯಂತಹ ಸನ್ನಿವೇಶಗಳ ಪರಿಣಾಮಗಳನ್ನು ಊಹಾತ್ಮಕವಾಗಿ ಕಲ್ಪಿಸಿಕೊಳ್ಳಬಹುದು. ಸುಮಾರು ಹದಿನೈದು ವರ್ಷಗಳಾಗುವ ವೇಳೆಗೆ ನಮ್ಮ ವಿದ್ಯಾರ್ಥಿಗಳು ತಮ್ಮ ಆಲೋಚನೆಯಲ್ಲಿ, ತಾರ್ಕಿಕವಾಗಿ ಸಮರ್ಥರಾಗಿರುತ್ತಾರೆ. ಅವರು ತಾವು ಸಾಯುವುದೇ ಇಲ್ಲ ಎಂದು ಭಾವಿಸುವುದಾಗಲೀ, ಅಥವಾ ತಾವೆಂದೂ ಗರ್ಭಿಣಿಯಗುವುದಿಲ್ಲ ಎಂದಾಗಲೀ, ತಮಗೆ ಏಯ್ಡ್ಸ್ ಬರುವುದಿಲ್ಲವೆಂದಾಗಲೀ, ನಿಜಕ್ಕೂ ನಂಬಿಕೆಯಿಟ್ಟದ್ದಾರೆ ಎಂಬುದರಿಂದ ಅವರ ವರ್ತನೆಗಳು ಹುಟ್ಟಿವೆ ಎಂಬುದು ಅಷ್ಟಾಗಿ ಸರಿಯಲ್ಲ. ಹಾಗಿದ್ದರೂ ಅಪಾಯವನ್ನು ಮೈಮೇಲೆಳೆದುಕೊಳ್ಳುವ ಪ್ರವೃತ್ತಿ ಹದಿಹರೆಯದಲ್ಲಿ ಬೇರಾವುದೇ ವಯಸ್ಸಿಗಿಂತ ಹೆಚ್ಚು ಕಂಡುಬರುತ್ತದೆ. ಈ ವಿರೋಧಾಭಾಸವನ್ನು ಹೇಗೆ ವಿವರಿಸುವುದು?

ಇದನ್ನು ಉತ್ತರಿಸಲು ನಾವು ಎರಡು ರೀತಿಯ ಮಿದುಳಿನ ಜಾಲಗಳನ್ನು ಪರಿಚಯ ಮಾಡಿಕೊಳ್ಳಬೇಕು: ಒಂದು, ಜ್ಞಾನಗ್ರಹಿಕೆಯ **ನಿಯಂತ್ರಣ ಜಾಲ**, ಇದು ಮಿದುಳಿನ ಹೊರವಲಯದಲ್ಲಿದೆ (prefrontal and parietal cortices), ಇನ್ನೊಂದು **ಸಮಾಜೋಭಾವನಾತ್ಮಕ ಜಾಲ**. ಇದು ಅಮಿಗ್ಡಾಲ (amygdala) ಮೊದಲಾದ ಲಿಂಬಿಕ್ (limbic) ಮತ್ತು ಪ್ಯಾರಾಲಿಂಬಿಕ್ (paralimbic) ಕ್ಷೇತ್ರಗಳಲ್ಲಿದೆ. ಜ್ಞಾನಗ್ರಹಿಕೆಯ ನಿಯಂತ್ರಣದಲ್ಲಿ ಸೇರಿರುವ ಅಂಶಗಳೆಂದರೆ ಪೂರ್ವಾಲೋಚನೆ, ಉದ್ವೇಗದ ನಿಯಂತ್ರಣ, ತೃಪ್ತಿಯ ವಿಳಂಬ (ಭವಿಷ್ಯದಲ್ಲಿ ಸಿಗುವ ಪ್ರತಿಫಲಕ್ಕಾಗಿ ಶ್ರಮಿಸುವುದು), ಸ್ವನಿಯಂತ್ರಣ, ಅಲ್ಲದೇ ಇದಕ್ಕೆ ಸಂಬಂಧಿಸಿದ ಮಿದುಳಿನ ಭಾಗಗಳು ಕ್ರಮೇಣ ನಿರಂತರವಾಗಿ, ಸ್ಥಿರವಾಗಿ ವಯಸ್ಕತನದ ಆರಂಭ ಸ್ಥಿತಿಯತ್ತ ಬೆಳೆಯುತ್ತಿರುತ್ತವೆ. ಪ್ರೌಢಾವಸ್ಥೆಯ ಆರಂಭಕ್ಕೆ ಮೇಲಿನ ಕ್ಷೇತ್ರಗಳಲ್ಲಿನ ಪಕ್ವತೆಯ ಮೇಲೆ ಯಾವುದೇ ವಿಶೇಷ ಪರಿಣಾಮವನ್ನೂ ಹೊಂದಿಲ್ಲವೆಂದು ಕಾಣುತ್ತದೆ. ಇನ್ನೊಂದೆಡೆ ಸಾಮಾಜಿಕ ಭಾವನಾತ್ಮಕ ಜಾಲವು ಭಾವನಾತ್ಮಕ ಮತ್ತು ಸಾಮಾಜಿಕ ಪ್ರಚೋದನೆಯ ಸೂಕ್ಷ್ಮತೆ, ಸಂವೇದನೆಯನ್ನು ಅರಸುವಿಕೆ ಮತ್ತು ಪ್ರತಿಫಲಮುಖಿಯಾಗಿರುವುದರ ಮೇಲೆ (ಅದರಲ್ಲೂ ನಿರ್ದಿಷ್ಟವಾಗಿ ತಕ್ಷಣದ ಪ್ರತಿಫಲಗಳತ್ತ) ನಿಯಂತ್ರಣ ಹೊಂದಿರುತ್ತದೆ. ಸಂಬಂಧಿತ ಮಿದುಳಿನ ಕ್ಷೇತ್ರಗಳು ಪ್ರೌಢಾವಸ್ಥೆಯ ಆರಂಭದ ಸಮಯದಲ್ಲಿ ಹೆಚ್ಚು ಸಂವೇದನಾಶೀಲವಾಗುತ್ತವೆ, ಹಾಗು ಅತಿಸುಲಭವಾಗಿ ಉದ್ರೇಕಕ್ಕೊಳಗಾಗುತ್ತವೆ. ಅವು ಹದಿಹರೆಯದ ಹಾರ್ಮೋನುಗಳ ಬದಲಾವಣೆಗಳ ಪರಿಣಾಮಕ್ಕೊಳಗಾಗುತ್ತವೆ.

ನಿರ್ಧಾರ ತೆಗೆದುಕೊಳ್ಳುವ ಹಲವು ಪ್ರಸಂಗಗಳು ಈ ಎರಡು ಜಾಲಬಂಧಗಳನ್ನು ಹದಿಹರೆಯದ ಸಮಯದಲ್ಲಿ ಪರಸ್ಪರ ಸ್ಪರ್ಧೆಗಿಳಿಸುತ್ತವೆ. ಹದಿಹರೆಯದ ವ್ಯಕ್ತಿ ಒಂಟಿಯಾಗಿದ್ದಾಗ ಸಾಮಾಜಿಕ ಭಾವನಾತ್ಮಕ ಜಾಲವು ಅಷ್ಟೇನೂ ಕ್ರಿಯಾಶೀಲವಾಗಿರುವುದಿಲ್ಲ ಮತ್ತು ಜ್ಞಾನಗ್ರಹಿಕೆಯ ನಿಯಂತ್ರಣ ಜಾಲವು ನಿರ್ಧಾರ ತೆಗೆದುಕೊಳ್ಳುವಲ್ಲಿ ಮಾರ್ಗದರ್ಶನ ಮಾಡಬಲ್ಲದು. ಆದರೂ ಸಹವರ್ತಿಗಳ ಉಪಸ್ಥಿತಿಯೇ ಮೊದಲಾದ ಭಾವನಾತ್ಮಕ ಪ್ರಸಂಗಗಳಲ್ಲಿ ಇದು ವಿರುದ್ಧವಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಜ್ಞಾನಗ್ರಹಿಕೆಯ ನಿಯಂತ್ರಣ ಜಾಲವು ಶಕ್ತಿಹೀನವಾಗುತ್ತದೆ. ಅದರಲ್ಲಿಯೂ, ಸಂಪೂರ್ಣವಾಗಿ ಇದರ ಬೆಳವಣಿಗೆಯೇ ಆಗಿರದ ಹದಿಹರೆಯದವರಲ್ಲಿ ಇದು ಸಂಭವಿಸುತ್ತದೆ. ಸಹವರ್ತಿಗಳ ಉಪಸ್ಥಿತಿಯು ಒಂದು ಸಾಮಾಜಿಕ ಪ್ರತಿಫಲದಂತೆ ಕೆಲಸ ಮಾಡುತ್ತಿದ್ದು, ಅಂತಹ

ಸಂದರ್ಭಗಳಿಗೆ ಸಂವೇದನಾಶೀಲವಾಗಿರುವ ಮಿದುಳಿನ ಭಾಗಗಳನ್ನು ಚುರುಕುಗೊಳಿಸುತ್ತದೆಂದು ಸ್ಟೈಯಿನ್‌ಬರ್ಗ್ ಊಹಿಸುತ್ತಾರೆ. ಅದರಿಂದ ಉಂಟಾದ ಪ್ರಚೋದನೆಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ವರ್ತಿಸುವಂತೆ ಮಾಡುವುದು ತೀರಾ ಅಪೇಕ್ಷಣೀಯ. ಏಕೆಂದರೆ, ಹದಿಹರೆಯದ ವ್ಯಕ್ತಿಯು ಅದನ್ನು ಪ್ರತಿರೋಧಿಸಲು ಸಾಧ್ಯವಾಗುವುದಿಲ್ಲ. ಇತ್ತೀಚಿನ ಮಿದುಳಿನ ಸ್ಕ್ಯಾನ್ (ಮಿದುಳಿನ ಕ್ರಮಾವಲೋಕನ)ಗೆ ಸಂಬಂಧಿಸಿದ ಸಂಶೋಧನೆಯು ಈ ಸಾಮಾನ್ಯ ಅಂಶವನ್ನು ವಿವಿಧ ರೀತಿಯಲ್ಲಿ ಖಚಿತಪಡಿಸುತ್ತದೆ. ಉದಾಹರಣೆಗೆ ಒಂದು ಅಧ್ಯಯನದಲ್ಲಿ, ಕೋಪದಲ್ಲಿರುವ ಜನರ ವಿಡಿಯೋ ತುಣುಕುಗಳನ್ನು, ಸಹವರ್ತಿಗಳ ಪ್ರಭಾವಕ್ಕೆ ಹೆಚ್ಚು ಮತ್ತು ಕಡಿಮೆ ಪ್ರತಿರೋಧವನ್ನು ಹೊಂದಿದ್ದ ವಿದ್ಯಾರ್ಥಿಗಳಿಗೆ ತೋರಿಸಿದಾಗ ಅವರ ಮಿದುಳಿನ ಚಟುವಟಿಕೆಗಳು ಭಿನ್ನವಾಗಿರುವುದು ಕಂಡು ಬಂದಿತು. ಸಹವರ್ತಿ ಪ್ರಭಾವಕ್ಕೆ ಕಡಿಮೆ ಪ್ರತಿರೋಧವನ್ನು ಹೊಂದಿದ್ದ ವಿದ್ಯಾರ್ಥಿಗಳಿಗೆ ಪ್ರಶ್ನಾವಳಿಯೊಂದನ್ನು (ಬಾಕ್ಸ್ 1ನ್ನು ನೋಡಿ) ನೀಡಿದಾಗ ಅವರ ಪ್ರಿಮೋಟಾರ್ ಕ್ಷೇತ್ರದಲ್ಲಿ (ಬೇರೆಯವರ ಕ್ರಿಯೆಗಳನ್ನು ಗಮನಿಸಲು ಹಾಗು ತನ್ನದೇ ಕ್ರಿಯೆಗಳಿಗೆ ಸಿದ್ಧವಾಗಲು ಕಾರಣವಾಗಿರುವ ಕ್ಷೇತ್ರ) ಮಿದುಳಿನ ಚಟುವಟಿಕೆ ಹೆಚ್ಚು ಕಂಡುಬಂದಿತ್ತು. ಹೆಚ್ಚಿನ ಪ್ರತಿರೋಧವನ್ನು ವ್ಯಕ್ತಪಡಿಸಿದವರಲ್ಲಿ ಪ್ರಿಮೋಟಾರ್ ಮತ್ತು ಪ್ರಿಫ್ರಂಟಲ್‌ಗಳ ನಡುವಿನ ಸಂಪರ್ಕಗಳ ಕ್ಷೇತ್ರದಲ್ಲಿ (ತರ್ಕಬದ್ಧ ತೀರ್ಮಾನ ತೆಗೆದುಕೊಳ್ಳಲು ಕಾರಣವಾಗಿರುವ ಭಾಗ) ಮಿದುಳಿನ ಚಟುವಟಿಕೆ ಹೆಚ್ಚು ಕಂಡುಬಂದಿತು. ಮಿದುಳಿನ ಪ್ರಿಮೋಟಾರ್ ಮತ್ತು ಪ್ರಿಫ್ರಂಟಲ್ ಕ್ಷೇತ್ರಗಳ ನಡುವಿನ ಹೆಚ್ಚಿನ ಮಟ್ಟದ ಸಂಪರ್ಕವು, ಬಹುಶಃ, ಅವಶ್ಯವಿದ್ದಾಗ ಪ್ರತಿರೋಧಿಸುವಂತೆ ಪ್ರಚೋದಕ ಪ್ರತಿಕ್ರಿಯೆಗಳಿಗೆ ಎಡೆಮಾಡಿಕೊಡುತ್ತದೆ. ಅಂದಹಾಗೆ, ತಟಸ್ಥ ವಿಷಯಗಳ ಕುರಿತ ಚಲನಚಿತ್ರಗಳ ತುಣುಕುಗಳನ್ನು ನೋಡುವಾಗ ಹೆಚ್ಚು ಮತ್ತು ಕಡಿಮೆ ಪ್ರತಿರೋಧವನ್ನು ತೋರಿಸಿದವರ ನಡುವೆ ಮಿದುಳಿನ ಚಟುವಟಿಕೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬರಲಿಲ್ಲ. ಸಹವರ್ತಿ ಪ್ರಭಾವಕ್ಕೆ ಪ್ರತಿರೋಧವೆಂಬುದು, ಸ್ವನಿಯಂತ್ರಣಗಳು ಮತ್ತು ಪ್ರಚೋದನೆಯ ನಿಯಂತ್ರಣಗಳ ಜೊತೆಗೆ, ಭಾವನಾತ್ಮಕ ಮತ್ತು ಸಾಮಾಜಿಕ ಉತ್ತುಂಗದ (ಸಹವರ್ತಿಗಳ ಇರುವಿಕೆಯಿಂದ ತೀವ್ರವಾದಂತಹ) ನಡುವೆ ಸಮತೋಲನ ಮಾಡುವ ಸಾಮರ್ಥ್ಯವನ್ನು ಕುರಿತದ್ದೆನಿಸುತ್ತದೆ.

ಸ್ಟೈಯಿನ್‌ಬರ್ಗ್ ಅವರು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವುದರ ಮೇಲೆ ಸಹವರ್ತಿಗಳ ಉಪಸ್ಥಿತಿಯ ಪರಿಣಾಮವನ್ನು ಕುರಿತಂತೆ ಇನ್ನೊಂದು ಆಸಕ್ತಿಕರ ಅಧ್ಯಯನದ ಬಗ್ಗೆ ಹೇಳಿದ್ದಾರೆ. ಹದಿಹರೆಯದವರು (ಹದಿಮೂರರಿಂದ ಹದಿನಾರು ವರ್ಷದವರು), ಕಾಲೇಜು ವಿದ್ಯಾರ್ಥಿಗಳು (ಹದಿನೆಂಟರಿಂದ ಇಪ್ಪತ್ತೆರಡು ವರ್ಷದವರು) ಹಾಗು ವಯಸ್ಕರರು (ಇಪ್ಪತ್ತನಾಲ್ಕು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು), ಇವರಿಗೆ ಒಂದು ವಾಹನವನ್ನು ಸಾಧ್ಯವಾದಷ್ಟೂ ದೂರ ಚಲಾಯಿಸಿ ಅಂಕಗಳನ್ನು ಗಳಿಸಬಹುದಾದ ಕಂಪ್ಯೂಟರ್ ಆಟವನ್ನು ನೀಡಲಾಯಿತು. ಕೆಲವು ಜಾಗಗಳಲ್ಲಿ ಒಂದು ಸಂಚಾರಿ ದೀಪವು ಹಳದಿಯಾಗಿ ನಂತರ ಕೆಂಪಾಗುತ್ತಿತ್ತು. ಕೆಂಪು ದೀಪವನ್ನು ದಾಟಿದರೆ ಅಪಘಾತವಾಗುವ ಸಾಧ್ಯತೆಯಿತ್ತು. ಹಳದಿ ದೀಪ ಬಂದಮೇಲೆ ಜನರು ಎಷ್ಟು ಬಾರಿ ತೂರಿ ಹೋಗಲು ಅಂದರೆ ಅಪಾಯಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿದರು ಎಂದು ಮನೋವಿಜ್ಞಾನಿಗಳು ಲೆಕ್ಕ ಹಾಕಿದರು. ಅರ್ಧದಷ್ಟು ಭಾಗಿಗಳು ಈ ಆಟವನ್ನು ಒಂಟಿಯಾಗಿ ಆಡಿದರೆ, ಇನ್ನರ್ಧ ಭಾಗಿಗಳು ಇವರಾಡುವ ಆಟವನ್ನು ನೋಡುತ್ತಾ ಸಲಹೆ ಕೊಡುತ್ತಿದ್ದ ಇಬ್ಬರು ಗೆಳೆಯರ ಜೊತೆ ಆಡಿದರು. ಇಲ್ಲಿನ ಚಿತ್ರವು ಫಲಿತಾಂಶಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ. ಹದಿಹರೆಯದವರು ಮತ್ತು ಸ್ವಲ್ಪ ಮಟ್ಟಿಗೆ ಯುವಕರು, ತಮ್ಮ ಸಹವರ್ತಿಗಳ ಉಪಸ್ಥಿತಿಯಲ್ಲಿ



ಹದಿಹರೆಯದ ರಿಸ್ಕ್ ತೆಗೆದುಕೊಳ್ಳುವುದು, ವಿಡಿಯೋ ಚಾಲನೆಯ ಆಟದಲ್ಲಿ ಕಿರಿಯ ವಯಸ್ಕರು ಮತ್ತು ವಯಸ್ಕರು, ಏಕಾಂಗಿಯಾಗಿ ಆಡುತ್ತಿರುವಾಗ ಮತ್ತು ಸ್ನೇಹಿತರ ಜೊತೆ ಆಡುತ್ತಿರುವಾಗ

ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವ ಪ್ರವೃತ್ತಿಯನ್ನು ಹೆಚ್ಚಿಸಿದರು. ಆದರೆ ಒಂಟಿಯಾಗಿ ಆಡುವಾಗ ಈ ಮೂರೂ ಗುಂಪುಗಳು ತೀರಾ ಒಂದೇ ರೀತಿ ಆಡಿದರು.

ಹದಿನಾಲ್ಕರಿಂದ ಹದಿನೇಳು ವರ್ಷದವರ ಜೊತೆ, ಅವರ ವಿವಿಧ ವರ್ತನೆಗಳಿಂದ ಉಂಟಾಗುವ ಅಪಾಯ ಮತ್ತು ಪರಿಣಾಮಗಳಿಗೆ ಸಂಬಂಧಿಸಿದಂತೆ ಬರೀ ಮಾತನಾಡುವುದರಿಂದ ಆಗುವ ಪರಿಣಾಮ ಸೀಮಿತವಾದುದು. ಏಕೆಂದರೆ ಅತಿ ಭಾವೋದ್ರೇಕಗಳನ್ನು ಹುಟ್ಟಿಸುವ ಪ್ರಕರಣಗಳಲ್ಲಿ ಅವರಿಗೆ ತಮ್ಮ ನಿರ್ಧಾರಗಳ ಮೇಲೆ ಹಿಡಿತ ಸಾಧಿಸುವುದು ಪ್ರಾಯೋಗಿಕವಾಗಿ ಅಸಾಧ್ಯವಾಗಿರುತ್ತದೆ ಎಂಬ ತೀರ್ಮಾನಗಳತ್ತ ಈ ಅಧ್ಯಯನವು ಬೊಟ್ಟು ಮಾಡುತ್ತದೆ ಎನಿಸುತ್ತದೆ. ಅದಕ್ಕೆ ಬದಲಾಗಿ ಬಾಹ್ಯ ಕ್ರಮಗಳನ್ನು ಸ್ಟೆಯಿನ್‌ಬರ್ಗ್ ಶಿಫಾರಸ್ಸು ಮಾಡುತ್ತಾರೆ. ಉದಾಹರಣೆಗೆ, ಸಿಗರೇಟಿನ ಬೆಲೆ ಹೆಚ್ಚಿಸುವುದು, ವಾಹನ ಚಾಲನೆಯ ವಯಸ್ಸನ್ನು ಹೆಚ್ಚಿಸುವುದು ಮತ್ತು ಮಾನಸಿಕ ಆರೋಗ್ಯ ಸೇವೆಗಳ ಹಾಗು ಗರ್ಭನಿರೋಧಕಗಳ ಲಭ್ಯತೆಯನ್ನು ಹೆಚ್ಚಿಸುವುದು, ಇತ್ಯಾದಿ. ಅವರ ಮಾತುಗಳಲ್ಲೇ ಹೇಳಬೇಕೆಂದರೆ, **ಹಾನಿಕಾರಕ ಪರಿಣಾಮ ಬೀರುವ ಅಪಕ್ವ ತೀರ್ಮಾನಗಳ ಅವಕಾಶಗಳನ್ನು ಮಿತಿಗೊಳಿಸಬೇಕು**. ಇದೊಂದು ಉತ್ತಮ ಸಲಹೆಯಾಗಿದ್ದರೂ ಇದರ ದುರ್ಬಳಕೆಗೆ ವಿಪುಲ ಅವಕಾಶವಿದೆ. ಇದರರ್ಥ, ಈ ಕಷ್ಟಕರ ಹಂತದಲ್ಲಿ ನಮ್ಮ ವಿದ್ಯಾರ್ಥಿಗಳನ್ನು ನಿಯಂತ್ರಿಸಬೇಕೆಂದಾಗಲೀ, ಅಪನಂಬಿಕೆಯಿಂದ ನೋಡಬೇಕೆಂದಾಗಲಿ ಅಲ್ಲ. ಹದಿಹರೆಯವನ್ನು ಕುರಿತ ಅಧ್ಯಯನವನ್ನು ಪರಿಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದರಿಂದ, ಇನ್ನೂ ಹೆಚ್ಚಿನ ಸೂಕ್ಷ್ಮ ಮತ್ತು ಪ್ರಾಯೋಗಿಕ ದೃಷ್ಟಿಕೋನದಿಂದ ನಾವು ನೋಡಬಹುದು. ಹದಿಹರೆಯದ ವಿದ್ಯಾರ್ಥಿಗಳು ಒಂದೆಡೆ ಅವಿವೇಕದ ವರ್ತನೆ ತೋರಿದರೆ, ಅದೇ ಸಮಯಕ್ಕೆ ಇನ್ನೊಂದೆಡೆ ಅವರಿಗೆ ಉನ್ನತ ಮಟ್ಟದ ವೈಚಾರಿಕ ಆಲೋಚನೆಯ ಸಾಮರ್ಥ್ಯಗಳೂ ಇರುತ್ತವೆ. ನಿಮ್ಮ ವಿದ್ಯಾರ್ಥಿಗಳಲ್ಲಿ ಅತ್ಯುತ್ತಮವಾದುದನ್ನು ಹೊರಹೊಮ್ಮಿಸಬೇಕೆಂದರೆ ಈ ಎರಡರ ನಡುವೆ ಒಂದು ಸಮತೋಲನವನ್ನು ಕಾಯ್ದುಕೊಳ್ಳಬೇಕು. ಅದಕ್ಕಾಗಿ ನೀವು ವಿಭಿನ್ನ ವಿಧಾನಗಳನ್ನು ಪ್ರಯತ್ನಿಸುವುದು, ಊರ್ಜಿತವಾಗದ ವಿಧಾನಗಳನ್ನು ತ್ಯಜಿಸಲು ಸಿದ್ಧವಿರುವುದು ಹಾಗು ನಿರಂತರವಾಗಿ ಅವರ ಹಿಮ್ಮಾಹಿತಿಗಳಿಗೆ

ಸ್ಪಂದಿಸಬೇಕು. ಇದು ಸುಲಭವೆಂದು ಯಾರೂ ಭರವಸೆ ನೀಡುತ್ತಿಲ್ಲ. ಹಾಗಿದ್ದೂ, ಹದಿಹರೆಯದವರ ಧನಾತ್ಮಕ ಸಾಮರ್ಥ್ಯವನ್ನು ಎಲ್ಲಾ ಸಮಯದಲ್ಲೂ ಮನಸ್ಸಿನಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ಈ ಮುಂದೆ ವಿವರಿಸಿದ ಅಧ್ಯಯನವು ಅವರ ಬೆಳವಣಿಗೆಯ ಈ ಮುಖವನ್ನು ಮನಮುಟ್ಟುವಂತೆ ವಿವರಿಸುತ್ತದೆ.

ಹದಿಹರೆಯದಲ್ಲಿ, ನಾವು ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲದ ಅಗಾಧ ಬೆಳವಣಿಗೆ ಮತ್ತು ವಿಕಾಸದ ಅತ್ಯುನ್ನತ ಸ್ಥಿತಿಯನ್ನು ನೋಡುತ್ತಿರುತ್ತೇವೆ. ಈ ಹಂತದ ಕೊನೆಯ ವೇಳೆಗೆ ಎತ್ತರ, ಕಾರ್ಯನಿರತ ಜ್ಞಾಪಕಶಕ್ತಿ, ಮಿದುಳಿನ ಗಾತ್ರ ಮತ್ತು ಬುದ್ಧಿಮತ್ತೆಯ ಮಟ್ಟಗಳೇ ಮೊದಲಾದ ಹಲವು ವಿಷಯಗಳು ಪೂರ್ಣ ಮತ್ತು ಸ್ಥಿರವಾಗುತ್ತವೆ ಎಂದು ಪರಿಗಣಿಸಲಾಗುತ್ತದೆ. ಆದರೆ ಜ್ಞಾನ ಮತ್ತು ಕೌಶಲಗಳು ನಮ್ಮ ಜೀವಿತದುದ್ದಕ್ಕೂ ಅಭಿವೃದ್ಧಿ ಹೊಂದುತ್ತಲೇ ಇರುತ್ತವೆ. ಹದಿಹರೆಯದ ಕೊನೆಯ ವೇಳೆಗೆ ಬೆಳವಣಿಗೆ ಕೊನೆಯಾಗದ ಒಂದು ಕ್ಷೇತ್ರವೆಂದರೆ **ವಿವೇಕ** ಎಂದು ನಾವು ನಂಬಬಹುದು. ನಾವು ಸಾಕಷ್ಟು ವಯಸ್ಕರಾಗದೇ, ವಿವೇಕಿಗಳಾಗಲು ಸಾಧ್ಯವಿಲ್ಲವೆಂದು ನಮ್ಮಲ್ಲಿ ಬಹುತೇಕರು ನಂಬುತ್ತೇವೆ. ಜೊತೆಗೆ ಇಪ್ಪತ್ತು ವರ್ಷದ ಒಬ್ಬ ವ್ಯಕ್ತಿಯನ್ನು ನಾವು ಖಂಡಿತಾ 'ಯುವ ವಿವೇಕಿ' ಎಂದು ಕರೆಯುವುದಿಲ್ಲ (ತಮಾಷೆಗೆ ಅಲ್ಲದಿದ್ದರೆ!). ದಶಕಗಳ ಕಾಲ ಜೀವಿತಾವಧಿಯಲ್ಲಿನ ಬೆಳವಣಿಗೆಯನ್ನು ಕುರಿತು ಅಧ್ಯಯನ ನಡೆಸಿರುವ ಮನೋವಿಜ್ಞಾನಿ ಪೌಲ್ ಬಾಲ್ಟ್ಸ್, ವಯಸ್ಕ ಮನೋವಿಜ್ಞಾನದ ಹಲವು ಅಂಶಗಳನ್ನು ಅಧ್ಯಯನ ಮಾಡಿದ್ದಾರೆ. ಅವರು ವಿವೇಕವನ್ನು ಅಧ್ಯಯನ ಮಾಡುವ ಅಸಾಧಾರಣ ಕೆಲಸವನ್ನು ಕೈಗೆತ್ತಿಕೊಂಡಿದ್ದಾರೆ. ಈ ಗುಣವು ಇಷ್ಟು ಅಮೂರ್ತವಾಗಿರುವಾಗ ಒಂದು ಕಾರ್ಯಕಾರಿ ವ್ಯಾಖ್ಯಾನವನ್ನು (operational definition) ಹುಟ್ಟು ಹಾಕುವುದು ಕಷ್ಟದ ಸವಾಲು. ಬಾಲ್ಟ್ಸ್ ಮತ್ತು ಅವರ ಸಹೋದ್ಯೋಗಿಗಳು ವಿವೇಕವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ: 'ಸಂಕೀರ್ಣ ಮತ್ತು ಅನಿಶ್ಚಿತ ವಿಚಾರಗಳನ್ನು ಕುರಿತು ಅಸಾಧಾರಣ ಒಳನೋಟ, ನಿರ್ಣಯ ಮತ್ತು ಸಲಹೆಯನ್ನು ನೀಡಬಲ್ಲ ಬದುಕಿನ ಮೂಲಭೂತ ವ್ಯಾವಹಾರಿಕತೆಯ ಜ್ಞಾನ. ಅವರು ಇದನ್ನು ವಿವೇಕ ಸಂಬಂಧಿ ಜ್ಞಾನ ಮತ್ತು ನಿರ್ಣಯ ಎಂದು ಕರೆದು ಈ ಮುಂದಿನ ಪಟ್ಟಿಯಲ್ಲಿ ತೋರಿಸಿರುವ ಐದು ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಪ್ರತಿಪಾದಿಸುತ್ತಾರೆ.


ವಿವೇಕದ ಮಾನದಂಡ	ಸಂಕ್ಷಿಪ್ತ ವಿವರಣೆ
1. ಜೀವನದ ಬಗ್ಗೆ ಸಮೃದ್ಧ ಪರಿಕಲ್ಪನಾತ್ಮಕ ಜ್ಞಾನ	ಜೀವನದ ವೈವಿಧ್ಯಮಯ ವಿಷಯಗಳನ್ನು (ನಿರ್ದಿಷ್ಟ ಮತ್ತು ಸಾಮಾನ್ಯ ವಿಭಾಗಗಳೆರಡರಲ್ಲಿಯೂ) ಗಹನವಾಗಿ ತಿಳಿಯುವುದು.
2. ಜೀವನದ ಬಗ್ಗೆ ಸಮೃದ್ಧ ಕಾರ್ಯವಿಧಾನ ಜ್ಞಾನ	ಹೇಗೆ ನಿರ್ಣಯವನ್ನು ಕೈಗೊಳ್ಳುವುದು, ಸಮಸ್ಯೆಗಳನ್ನು ಬಗೆಹರಿಸುವುದು, ಗುರಿ ಮುಟ್ಟುವುದು ಮತ್ತು ವೈವಿಧ್ಯಮಯ ಸನ್ನಿವೇಶಗಳಲ್ಲಿ ಹೇಗೆ ಸಲಹೆ ನೀಡುವುದು ಎಂದು ತಿಳಿಯುವುದು.
3. ಜೀವಿತಾವಧಿಯ ಸಾಂದರ್ಭೀಕರಣ	ಭೂತ, ವರ್ತಮಾನ ಮತ್ತು ಭವಿಷ್ಯ ಸಾಧ್ಯ ಸಂದರ್ಭಗಳನ್ನು ಅರ್ಥ ಮಾಡಿಕೊಳ್ಳುವುದು.

ವಿವೇಕದ ಮಾನದಂಡ	ಸಂಕ್ಷಿಪ್ತ ವಿವರಣೆ
4. ಮೌಲ್ಯ ಸಾಪೇಕ್ಷತೆ	ಸಾರ್ವತ್ರಿಕ ಮೌಲ್ಯಗಳನ್ನು ಹೊಂದುವುದರ (ಎಲ್ಲರ ಒಳಿತಿಗಾಗಿ) ಜೊತೆಗೆ ಜೀವನದ ಬಹಳಷ್ಟು ಮೌಲ್ಯಗಳು ಸಾಪೇಕ್ಷವೆಂದು ತಿಳಿಯುವುದು.
5. ಅನಿಶ್ಚಿತತೆಯನ್ನು ಗೌರವಿಸುವುದು ಮತ್ತು ನಿರ್ವಹಿಸುವುದು.	ಜೀವನವು ಮೂಲತಃ ಅನಿಶ್ಚಿತ ಎಂದು ತಿಳಿದುಕೊಳ್ಳುವುದರ ಜೊತೆ, ಆ ಅನಿಶ್ಚಿತತೆಯನ್ನು ಹೇಗೆ ನಿಭಾಯಿಸಬೇಕೆಂದು ತಿಳಿಯುವುದು.

ಇತರೆಲ್ಲ ಕಾರ್ಯಕಾರಿ ವ್ಯಾಖ್ಯಾನಗಳಂತೆ ನೀವಿದನ್ನು ಒಪ್ಪಬಹುದು ಅಥವಾ ಬಿಡಬಹುದು. ಆದರೆ, ಕನಿಷ್ಠ ಇದು ಹೋಲಿಕೆಯಲ್ಲಾದರೂ ಸ್ಪಷ್ಟವಾಗಿದೆ. ಬಾಲ್ಟ್ಸ್ ಮತ್ತು ಇತರರು ಈ ಆಸಕ್ತಿಕರ ವಿಷಯವನ್ನು ಇಪ್ಪತ್ತೈದರಿಂದ ಎಂಬತ್ತು ವರ್ಷದ ವಯಸ್ಕರಲ್ಲಿ ಅಧ್ಯಯನ ಮಾಡಿ, ವಯಸ್ಸಿನೊಂದಿಗೆ ವಿವೇಕವು ಸ್ವಯಂ ಹೆಚ್ಚಾಗುವುದಿಲ್ಲ ಎಂಬ ಅಚ್ಚರಿಯ ಸಂಗತಿಯನ್ನು ಕಂಡುಕೊಂಡಿದ್ದಾರೆ. ಅವರ ವ್ಯಾಖ್ಯಾನ ಮತ್ತು ವಿಧಾನಗಳನ್ನು ಬಳಸಿ ಹೇಳುವುದಾದರೆ, ವಿವೇಕಿಗಳೆಂದರೆ ವಯಸ್ಸಾದವರಲ್ಲ, ಬದಲಿಗೆ, ನಿರ್ದಿಷ್ಟ ಅನುಭವಗಳು ಮತ್ತು ಅನುಭವಕ್ಕೆ ಒಡ್ಡಿಕೊಳ್ಳಲು ಮುಕ್ತರಾಗಿರುವುದು, ಮತ್ತು ವಸ್ತುವಿಷಯಗಳ ಮೇಲೆ ತನ್ನಲ್ಲೇ ಪರ್ಯಾಲೋಚಿಸುವ ಪ್ರವೃತ್ತಿಯನ್ನೊಳಗೊಂಡ ವ್ಯಕ್ತಿತ್ವದ ವಿಶೇಷ ಲಕ್ಷಣಗಳು ವಿವೇಕ ಸಂಬಂಧಿ ಜ್ಞಾನ ಮತ್ತು ನಿರ್ಣಯಗಳಿಗೆ ಕಾರಣವಾಗುವ ಅಂಶಗಳು ಎಂದು ಕಾಣುತ್ತವೆ.

ಹಾಗಾದರೆ, ವಿವೇಕವೂ ಕೂಡ ಹದಿಹರೆಯದಲ್ಲಿಯೇ ಪಕ್ವವಾಗುವ ಇನ್ನೊಂದು ಗುಣಲಕ್ಷಣವಿರಬಹುದೆ? ಬಾಲ್ಟ್ಸ್ ಮತ್ತು ಅವರ ಸಹೋದ್ಯೋಗಿಗಳಾದ ಮೊನಿಷಾ ಪಶುಪತಿ ಮತ್ತು ಉರ್ಸುಲಾ ಸ್ಟೌಡಿಂಗರ್ ಈ 'ವಿವೇಕದ ಮೂಲ'ಗಳನ್ನು ಹದಿಹರೆಯದವರಲ್ಲಿ ಅಧ್ಯಯನ ಮಾಡಲು ನಿರ್ಧರಿಸಿದರು. ಬರ್ಲಿನ್‌ನ ಶಾಲೆಗಳಲ್ಲಿದ್ದ ಹದಿನಾಲ್ಕರಿಂದ ಹತ್ತೊಂಬತ್ತು ವರ್ಷದ ನಡುವಿನ ನೂರೈವತ್ತು ಮಕ್ಕಳು ಮತ್ತು ಇಪ್ಪತ್ತರಿಂದ ಮೂವತ್ತೇಳು ವರ್ಷದ ನಡುವಿನ ಅರವತ್ತು ಯುವಕರಿಗೆ ಕೆಳಗೆ ವಿವರಿಸಿದಂತೆ ಯೋಚಿಸಲು ಕೆಲವು ಕಾಲ್ಪನಿಕ ದ್ವಂದ್ವಗಳನ್ನು ನೀಡಲಾಯಿತು:

- ಒಬ್ಬ ಹದಿಹರೆಯದ ವ್ಯಕ್ತಿಗೆ ತಾನು ತನ್ನ ಭವಿಷ್ಯಕ್ಕೆ ಅತೀ ಮುಖ್ಯವಾಗಿರುವ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿರುವುದು ತಿಳಿಯುತ್ತದೆ. ಅಂತಹ ಸಂದರ್ಭದಲ್ಲಿ ಯಾವುದೇ ವ್ಯಕ್ತಿ ಅಥವಾ ಆ ಹದಿಹರೆಯದ ವ್ಯಕ್ತಿ ಏನು ಮಾಡಬಹುದು ಮತ್ತು ಏನು ಯೋಚಿಸಬಹುದು?
- ಒಬ್ಬ ಹದಿಹರೆಯದ ವ್ಯಕ್ತಿಗೆ ತನ್ನ ಸ್ನೇಹಿತ/ತೆಯರು ಇನ್ನು ಮುಂದೆ ತಮ್ಮ ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳುತ್ತಿಲ್ಲ ಎಂದು ಗೊತ್ತಾಗುತ್ತದೆ. ಅಂತಹ ಸಂದರ್ಭದಲ್ಲಿ ಯಾವುದೇ ವ್ಯಕ್ತಿ ಅಥವಾ ಆ ಹದಿಹರೆಯದ ವ್ಯಕ್ತಿ ಏನು ಮಾಡಬಹುದು ಮತ್ತು ಏನು ಯೋಚಿಸಬಹುದು?
- ಒಬ್ಬ ವ್ಯಕ್ತಿ ತನ್ನ ಜೀವನದ ಬಗ್ಗೆ ಯೋಚಿಸುವಾಗ, ತಾನು ಒಂದೊಮ್ಮೆ ಕಲ್ಪಿಸಿಕೊಂಡದ್ದನ್ನೆಲ್ಲಾ ಸಾಧಿಸಿಲ್ಲ ಎಂದು ಗೊತ್ತಾಗುತ್ತದೆ. ಅಂತಹ ಸಂದರ್ಭದಲ್ಲಿ ಯಾವುದೇ ವ್ಯಕ್ತಿ ಅಥವಾ ಆ ವ್ಯಕ್ತಿ ಏನು ಮಾಡಬಹುದು?



ಹದಿಹರೆಯದವರು, ಯುವಜನರು ಮತ್ತು ವಯಸ್ಕರು, ಒಂಟಿಯಾಗಿ ಮತ್ತು ಸ್ನೇಹಿತರ ಉಪಸ್ಥಿತಿಯಲ್ಲಿ ವಾಹನ ಚಲಾಯಿಸುವ ವಿಡಿಯೋ ಆಟವಾಡುವಾಗ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವಿಕೆ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಈ ದ್ವಂದ್ವಗಳ ಬಗ್ಗೆ 'ಮಾತಿನಲ್ಲಿ ಹೇಳುತ್ತಾ ಆಲೋಚಿಸಲು' ಹೇಳಲಾಯಿತು. ಅವರ ಆಲೋಚನೆಗಳ ಪ್ರಮಾಣಾಂಕನ (ratings)ಗಳನ್ನು ಐದು ವಿಭಿನ್ನ ಮಾನದಂಡಗಳಲ್ಲಿ ಗುರುತಿಸಲಾಯಿತು. ಫಲಿತಾಂಶಗಳು ಗಮನಾರ್ಹವಾಗಿದ್ದವು. ಐದು ಮಾನದಂಡಗಳಲ್ಲಿ, ಹದಿನಾಲ್ಕರಿಂದ ಇಪ್ಪತ್ತ್ಮೂರು ವರ್ಷದವರಲ್ಲಿ ಅಂಕಗಳ ದಿಢೀರ್ ಹೆಚ್ಚಳ ಕಂಡುಬಂತು. ಆದರೆ ಇಪ್ಪತ್ತ್ಮೂರು ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನವರೊಂದಿಗೆ ಈ ಅಂಕಗಳು ವಯಸ್ಸಿನೊಂದಿಗೆ ಮತ್ತೆ ಹೆಚ್ಚಳಗೊಂಡಿರುವುದೇನೂ ಕಂಡುಬಂದಿಲ್ಲ (ತಕ್ಷಣದ ಮುಂದಿನ ಚಿತ್ರವನ್ನು ಗಮನಿಸಿ).

ಈ ಅಧ್ಯಯನವು ವಿವೇಕಸಂಬಂಧಿತ ಜ್ಞಾನ ಮತ್ತು ನಿರ್ಣಯಗಳ ಬೆಳವಣಿಗೆ ಹದಿನಾಲ್ಕರಿಂದ ಹತ್ತೊಂಭತ್ತರ ವಯಸ್ಸಿನವರಿಗೆ ಪ್ರಮಾಣಕವಾಗಿರುತ್ತವೆ, ಅಂದರೆ, ಅವು ಹದಿಹರೆಯದವರಲ್ಲೆಲ್ಲ ಕಂಡುಬರುವ ಅಂಶಗಳಿಂದಲೇ ನಿರ್ಧರಿತವಾಗಿರುತ್ತವೆ. ಅದರಾಚೆಗೆ, ವಿವೇಕಕ್ಕೆ ಸಂಬಂಧಿಸಿದ ಹೆಚ್ಚಿನ ಬೆಳವಣಿಗೆಯು ಅಪ್ರಮಾಣಕವಾಗಿರುತ್ತದೆ ಅಥವಾ ವ್ಯಕ್ತಿಯ ವೈಯಕ್ತಿಕ ಅಂಶಗಳಿಂದ ನಿರ್ಧರಿತವಾಗುತ್ತದೆ. ಇವು ಹದಿಹರೆಯ ಮತ್ತು ಆರಂಭದ ವಯಸ್ಕತನದ ಬಗ್ಗೆ ನಮ್ಮ ಯೋಚನಾಧಾಟಿಯಲ್ಲಿ ಪಲ್ಲಟವನ್ನು ಬಯಸುತ್ತವೆ. ನೀವದನ್ನು ವಿವೇಕ ಅಥವಾ ಇನ್ನೇನಾದರೂ ಕರೆಯಿರಿ. ಆದರೆ ನಮಗೆ ಅಥವಾ ಇನ್ನೂ ವಯಸ್ಸಾದವರಿಗೆ ಮಾತ್ರ ಅದು ಇರುತ್ತದೆ ಎಂದುಕೊಳ್ಳುವ ನಾವು, ಯುವ ಜನರಲ್ಲಿರುವ ಆ ಗುಣವನ್ನು ಗೌರವಿಸಬೇಕು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವಿವೇಕದ ಬೀಜಗಳು ನಿಜವಾಗಿ ಕಂಡುಬರುವುದೇ ಹದಿಹರೆಯದಲ್ಲಿ.

ಕೊನೆಯದಾಗಿ

ನಮ್ಮ ವಿದ್ಯಾರ್ಥಿಗಳು ಹದಿಹರೆಯಕ್ಕೆ ಕಾಲಿಡುವುದೇ ತಿಳಿಯುವುದಿಲ್ಲ. ಇದ್ದಕ್ಕಿದ್ದಂತೆ ನೀವು ಒಂದು ದಿನ ಹದಿನೆರಡು ವರ್ಷದ ಹುಡುಗಿಯೊಬ್ಬಳ ಜೊತೆ ಮಾತನಾಡಲು ತಲೆಯೆತ್ತಿ ನೋಡತೊಡಗುತ್ತೀರಿ ಅಥವಾ ಹದಿನಾಲ್ಕು ವರ್ಷದ ಹುಡುಗನೊಬ್ಬನ ಜೊತೆ ದೂರವಾಣಿಯಲ್ಲಿ ಮಾತನಾಡುವಾಗ ಅವನನ್ನು ಅವನ ತಂದೆ ಎಂದು ತಪ್ಪಾಗಿ ಭಾವಿಸುತ್ತೀರಿ. ನಮ್ಮ ದೃಷ್ಟಿಯಲ್ಲಿ ಅವರಿನ್ನೂ 'ಮಕ್ಕಳು' ಆಗಿರಬಹುದು. ಆದರೆ ಅವರು ಸಮರ್ಥನೀಯವಾಗಿ ಈಗ ತಮ್ಮನ್ನು ಭಿನ್ನವಾಗಿ ನೋಡಲಿ ಎಂದು ಬಯಸುತ್ತಿರುತ್ತಾರೆ. ಈ ಪ್ರಕ್ಷುಬ್ಧ ಮತ್ತು ಉತ್ಸಾಹಮಯ ಅವಧಿಯಲ್ಲಿ, ಅವರ ಜೀವನದಲ್ಲಿ ಮತ್ತು ಮನಸ್ಸಿನಲ್ಲಿ ಏನು ನಡೆಯುತ್ತದೆ ಎಂಬುದರ ಕುರಿತಾದ ಹೆಚ್ಚಿನ ಅರಿವು, ಅವರ ಜೊತೆಗಿನ ಒಡನಾಟಗಳಲ್ಲಿ ನಾವು ಹೆಚ್ಚು ಸಂವೇದನಾಶೀಲರೂ, ವಿವೇಕಿಗಳೂ ಹಾಗು ಸಹನಶೀಲರೂ ಆಗಿರಲು ಸಹಾಯ ಮಾಡುತ್ತದೆ. ಆಗ 'ಹದಿಹರೆಯ'ವೆಂಬುದು ತನ್ನ ಋಣಾತ್ಮಕತೆಯನ್ನು ಕೊಡವಿಕೊಳ್ಳಬಹುದು.